
ಬಿಸಿಲ ಬದುಕು ಮಾಸಪತ್ರಿಕೆಯ
ಆಗಸ್ಟ್ 1998ರ ಸಂಚಿಕೆಯೊಂದಿಗೆ
ವಿಶೇಷ ಉಚಿತ ಕೊಡುಗೆ

ಮಾರ್ಗದರ್ಶಿ

ವಿದ್ಯೆ ಮತ್ತು ಉದ್ಯೋಗ ಆಕಾಂಕ್ಷಿಗಳ ಕೈಪಿಡಿ



ಡಾ. ಎಸ್.ಸಿ. ಶರ್ಮಾ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಯಂತ್ರಶಾಸ್ತ್ರ ವಿಭಾಗ,
ನಿರ್ದೇಶಕರು, ಸಂಶೋಧನೆ ಮತ್ತು ಅನುಸಂಧಾನ
ರಾ.ವಿ. ತಾಂತ್ರಿಕ ಕಾಲೇಜು, ಬೆಂಗಳೂರು - 560 059

ಡಾ. ಎಸ್.ಸಿ. ಶರ್ಮಾ

ಬೆಂಗಳೂರಿನ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಎಸ್.ಸಿ.ಶರ್ಮಾ ಅವರು ಕಾಲೇಜಿನಲ್ಲಿ ಸಂಬಳಕ್ಕಾಗಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಷಯ ಬೋಧಿಸಿ ಮನೆಯಲ್ಲಿ ಮಕ್ಕಳೊಂದಿಗೆ ಹಾಯಾಗಿ ಕಾಲ ಕಳೆಯುವ ಪೈಕಿಯಲ್ಲ. ವಿದ್ಯಾರ್ಥಿ-ಯುವ ಜನರ ಪರವಾದ ಹತ್ತು ಹಲವು ಯೋಜನೆಗಳನ್ನು ತಲೆ ತುಂಬ ತುಂಬಿಕೊಂಡು ಸುತ್ತುತ್ತಿರುತ್ತಾರೆ. ಅವರ ಆಸಕ್ತಿಯ ಕಾರ್ಯ ಕ್ಷೇತ್ರಗಳಲ್ಲಿ ವಿದ್ಯೆ-ಉದ್ಯೋಗ ಕುರಿತ ಮಾರ್ಗದರ್ಶನವೂ ಒಂದು. ಹಳ್ಳಿಗಾಡಿನ ಬಡ ವರ್ಗದವರಿಗೆ ತರಬೇತಿ ನೀಡಲೆಂದು ಸಮಾಜ ಸೇವಾ ಕೇಂದ್ರವನ್ನು ಸ್ಥಾಪಿಸಿ ಅದರಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯನ್ನು ಮೊದಲ ರ್ಯಾಂಕ್ ಸಹಿತ ತಮ್ಮದಾಗಿಸಿಕೊಂಡಿರುವ ಡಾ.ಶರ್ಮಾ ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ.ಯನ್ನೂ ಗಳಿಸಿದ್ದಾರೆ. ಅಮೆರಿಕಾ, ಜಪಾನ್, ಆಸ್ಟ್ರೇಲಿಯಾ, ಪಾಕಿಸ್ತಾನ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ ನೀಡಿದ ಅನುಭವವನ್ನು ಹೊಂದಿರುವ ಈ ಮೇಷ್ಟ್ರ ಮತ್ತೊಂದು ಆಸಕ್ತಿಯ ಕ್ಷೇತ್ರವೆಂದರೆ ಕರ್ನಾಟಕ ಸಂಗೀತ. ಕರ್ನಾಟಕ ಸಂಗೀತ ಮತ್ತು ನೃತ್ಯ ಕಲಾ ಅಕಾಡೆಮಿಯ ಪ್ರತಿಷ್ಠಿತ **ಕರ್ನಾಟಕ ಕಲಾಶ್ರೀ** ಪ್ರಶಸ್ತಿ ಇವರ ಮನೆ ಬಾಗಿಲು ಬಡಿದಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಬಳಿ ಬಂದಿದೆ.

ಪ್ರತಿಭೆಯೊಂದಿಗೆ ಸಮಾಜಕ್ಕೆ ಒಳಿತು ಮಾಡುವ ತುಡಿತ ಹೊಂದಿರುವ ಇಂತಹ ಅಪರೂಪದ ಪ್ರಾಧ್ಯಾಪಕರು **ಬಿಸಿಲ ಬದುಕು** ಪತ್ರಿಕೆಯೊಂದಿಗೆ ಕೈಜೋಡಿಸಿ ಪ್ರತಿ ತಿಂಗಳು ವಿದ್ಯೆ-ಉದ್ಯೋಗದ ಬಗ್ಗೆ **'ಮಾರ್ಗದರ್ಶನ'** ಮಾಡುತ್ತಿದ್ದಾರೆ.

ಸುರೇಂದ್ರಕುಮಾರ್, ನಾಗಮಂಗಲ.

೧೯೯೦-೯೧ರಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಪ್ರತಿಶತ ೫೩ರಷ್ಟು ಅಂಕಗಳೊಂದಿಗೆ ತೇರ್ಗಡೆಯಾಗಿ, ಈಗ ವಯಸ್ಸಿನ ಆಧಾರದ ಮೇಲೆ ಮೈಸೂರು ವಿಶ್ವವಿದ್ಯಾಲಯದ 'ಅಂಚೆ ತೆರಪಿನ ಶಿಕ್ಷಣ'ದಲ್ಲಿ ಕನ್ನಡ ಎಂ.ಎ. ಪರೀಕ್ಷೆ ತೆಗೆದುಕೊಂಡಿದ್ದೇನೆ. ಎಂ.ಎ. ಮುಗಿಸಿ ಐ.ಎ. ಎಸ್., ಕೆ.ಎ.ಎಸ್. ಮಾಡುವ ಆಸೆ. ಅದಕ್ಕೆ ಕನಿಷ್ಟ ಅರ್ಹತೆ ಬಿ.ಎ. ಎಂದು ತಿಳಿಸಿದ್ದೀರಿ. ಬಿ.ಎ. ಮಾಡದೆ ಎಂ.ಎ. ಮುಗಿಸುವ ನಾನು ಐ.ಎ.ಎಸ್., ಕೆ.ಎ.ಎಸ್.ನಂತಹ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೇ? ಮಾಹಿತಿ ಒದಗಿಸಿ.

ಕೆ.ಎ.ಎಸ್. ಮತ್ತು ಐ.ಎ.ಎಸ್. ನಡೆಸುವ ಕೆ.ಪಿ.ಎಸ್.ಸಿ. ಮತ್ತು ಯು.ಪಿ.ಎಸ್.ಸಿ. ಯವರು ಈ ಪರೀಕ್ಷೆಗಳಿಗೆ ಕನಿಷ್ಟ ವಿದ್ಯಾರ್ಹತೆ ಪದವಿಯನ್ನು ನಿಗದಿಪಡಿಸಿರುತ್ತಾರೆ. ಎಂ.ಎ. ಆಧಾರದ ಮೇಲೆ ಈ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ.

ಹೇಮಾ ಎಂ.ಪ್ಯಾಟಿ, ಯಕ್ಕುಂಡಿ.

೧೯೯೬-೯೭ರಲ್ಲಿ ಪಿ.ಯು.ಸಿ. ಫೇಲಾಗಿರುವ ನನಗೆ ವಯಸ್ಸು ೨೦ ವರ್ಷ. ಮಾನಸ ಗಂಗೋತ್ರಿಯಲ್ಲಿ ಅಂಚೆ ತೆರಪಿನ ಶಿಕ್ಷಣದ ಮೂಲಕ ಬಿ.ಎ. ಮಾಡಬಹುದೇ? ಹಾಗಿದ್ದರೆ, ದಯಮಾಡಿ ಸಂಪೂರ್ಣ ವಿವರ ಕೊಡಿ.

ಅಂಚೆ ತೆರಪಿನ ಮೂಲಕ ಬಿ.ಎ. ಪದವಿ ಮಾಡಲು ಕನಿಷ್ಟ ವಯಸ್ಸು ೧೮ ವರ್ಷಗಳಾಗಿರಬೇಕು. ಇದಕ್ಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬ ಇವರನ್ನು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

ಮೊಹಮ್ಮದ್ ನಜೀರುದ್ದೀನ್, ಕನಕಗಿರಿ.

ಕುವೆಂಪು ವಿಶ್ವವಿದ್ಯಾಲಯದಲ್ಲಿ ಬಿ.ಎಡ್. ಮಾಡುತ್ತಿರುವ ನಾನು ಮುಂದೆ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎಡ್. ಮಾಡುವ ಬಯಕೆ. ಇದು ಸಾಧ್ಯವೆ? ಸಂಕ್ಷಿಪ್ತವಾಗಿ ತಿಳಿಸಲು ವಿನಂತಿ.

ನೀವು ಕುವೆಂಪು ವಿಶ್ವವಿದ್ಯಾಲಯದಲ್ಲಿ ಬಿ.ಎಡ್. ಮುಗಿದ ನಂತರ ತಮ್ಮ ಆಸೆಯಂತೆ ಎಂ.ಎಡ್. ಶಿಕ್ಷಣವನ್ನು ಮುಂದುವರೆಸಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸದಿಂದ ತಿಳಿದುಕೊಳ್ಳಿ.

Director, Directorate of Distance Education, Annamalai University, Annamalainagar - 608 002

ಶ್ರೀಹರಿ, ತುಮಕೂರು.

ಪ್ರಥಮ ಬಿ.ಎ. ಓದುತ್ತಿರುವ ನನಗೆ ಮನೆಯಲ್ಲಿಯ ಕೆಲವು ತೊಂದರೆಗಳಿಂದ ಮೂರು ವರ್ಷಗಳ ಕಾಲ ಬಿ.ಎ. ಓದಲು ಆಗುತ್ತಿಲ್ಲ. ಬಿ.ಎ.ಯನ್ನು ಒಂದು ವರ್ಷದಲ್ಲಿ ಕೊಡುವ ಶಿಕ್ಷಣ ಸಂಸ್ಥೆಗಳಿದ್ದರೆ ವಿಳಾಸ ತಿಳಿಸಿ. ಒಂದೇ ವರ್ಷಕ್ಕೆ ಮುಗಿಸಿದ ಪದವಿಯಿಂದ ಐ.ಎ.ಎಸ್. ಹಾಗೂ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗೆ ಕೂರಲು ತೊಂದರೆ ಆಗುವುದಿಲ್ಲವೆ?

ನೀವು ಬಿ.ಎ.ಯನ್ನು ಒಂದೇ ವರ್ಷದಲ್ಲಿ ಓದಿ ಪದವಿಯನ್ನು ಪಡೆಯಬಹುದು. ಈ ಪದವಿಯ ಆಧಾರದ ಮೇಲೆ ನೀವು ಕೆ.ಎ. ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗೆ ಕೂರಬಹುದು. ನಿಮ್ಮ ಶಿಕ್ಷಣದ ಸಲುವಾಗಿ ಈ ವಿಳಾಸದಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಿರಿ.

ಉಸ್ಮಾನಿಯ ವಿಶ್ವವಿದ್ಯಾಲಯ,
ಹೈದರಾಬಾದ್ - ೫೦೦ ೦೦೭

ಹೆಸರಿಲ್ಲ, ಹುಬ್ಬಳ್ಳಿ

ನಾನು ಪ್ರಥಮ ಪಿ.ಯು.ಸಿ.ವರೆಗೆ ಮಾತ್ರ ಓದಿದೆ ಮುಂದೆ ಆಗಲಿಲ್ಲ. ಈಗ ನನಗೆ ೩೧ ವರ್ಷ ಮುಕ್ತ ವಿಶ್ವವಿದ್ಯಾಲಯ (ಮೈಸೂರು)ದ ಮೂಲಕ ಎಂ.ಎ.ಕಟ್ಟಬೇಕೆಂದು ನಿರ್ಧರಿಸಿರುವೆ. ಜಾತಿಯಿಂದ ಎಸ್.ಸಿ. (ಹಿಂದೂ ಸಮಗಾರ) ಆಗಿದ್ದು. ಎಂ.ಎ. ಮುಗಿದ ನಂತರ ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆ ತೆಗೆದುಕೊಳ್ಳಲು ಅರ್ಹನೆ? ವಯೋಮಿತಿ ಅನುಗುಣವಾಗಿ ಉದ್ಯೋಗ ಸಿಗುವುದೆ? ಎಸ್.ಎಸ್. ಎಲ್.ಸಿ. ಮಾರ್ಕ್ಸ್‌ಕಾರ್ಡಿನ ಆಧಾರದ ಮೇಲೆ ನೇರವಾಗಿ ಕನ್ನಡದಲ್ಲಿ ಎಂ.ಎ. ಮಾಡಬಹುದೆ? ಅದರ ಪುಸ್ತಕ, ನೋಟ್ಸ್‌ಗಳು ಎಲ್ಲಿ ಸಿಗುತ್ತವೆ? ಐ.ಎ.ಎಸ್. ಪರೀಕ್ಷೆಗೆ ಎಷ್ಟು ಸಲ ಕೂರಬಹುದು? ನಾನು ಪರಿಶಿಷ್ಟ ಜಾತಿಯವನಾದ್ದರಿಂದ ವಯಸ್ಸಿನ ಸಡಿಲಿಕೆ ಎಷ್ಟು? ದಯಮಾಡಿ ತಿಳಿಸಿ.

ನೀವು ವಯಸ್ಸಿನ ಆಧಾರದ ಮೇಲೆ ಮುಕ್ತ ವಿಶ್ವವಿದ್ಯಾಲಯದಿಂದ ಎಂ.ಎ. ಮಾಡಬಹುದು. ಈ ಎಂ.ಎ. ಆಧಾರದ ಮೇಲೆ ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ. ಐ.ಎ.ಎಸ್.ಗೆ ಕನಿಷ್ಟ ೨೧ ವರ್ಷ ಗರಿಷ್ಟ ೨೬ ವರ್ಷ. ಕೆ.ಎ. ಎಸ್.ಗೆ ಗರಿಷ್ಟ ೨೮ ಪರಿಶಿಷ್ಟ ಜಾತಿ/ವರ್ಗದವರಿಗೆ ವಯೋಮಿತಿಯಲ್ಲಿ ೫ ವರ್ಷಗಳ ರಿಯಾಯಿತಿ ಇರುತ್ತದೆ.

ಶ್ರೀನಿವಾಸ, ಮೂಡಿಗೆರೆ.

ಎಸ್.ಎಸ್.ಎಲ್.ಸಿ. ನಂತರದ ವಿದ್ಯಾಭ್ಯಾಸ ಸಾಧ್ಯವಾಗಲಿಲ್ಲ. ಐ.ಎ.ಎಸ್.ಮಾಡಲು ಇಷ್ಟ. ಧಾರವಾಡದ ರಾಷ್ಟ್ರೀಯ ವಿದ್ಯಾಲಯದಲ್ಲಿ ನೇರವಾಗಿ ಅಂತಿಮ ಬಿ.ಎ. ಕಟ್ಟಲು ಇಚ್ಛಿಸಿದ್ದೇನೆ. ಒಂದೇ ವರ್ಷದಲ್ಲಿ ಅಂತಿಮ ಬಿ.ಎ.ಕಟ್ಟಿ ತೇರ್ಗಡೆಯಾದರೆ ಐ.ಎ.ಎಸ್. ಪರೀಕ್ಷೆಗೆ ಕೂರಲು ಸಾಧ್ಯವೆ? ಅಲ್ಲದೆ ಆ ಅಂಕಪಟ್ಟಿ ಮೂರು ವರ್ಷದ ಬಿ.ಎ.ಗೆ ಸಮವೇ? ತಿಳಿಸಿ.

ನೀವು ನೇರವಾಗಿ ಬಿ.ಎ. ಮಾಡಬಹುದು. ಬಿ.ಎ. ಆಧಾರದ ಮೇಲೆ ಐ.ಎ.ಎಸ್. ಪರೀಕ್ಷೆಗೆ ಕೂರಬಹುದು. ಇದು ರೆಗ್ಯುಲರ್ ಬಿ.ಎ.ಗೆ ಸಮಾನವಾಗಿರುತ್ತದೆ.

ಜಿ.ವಾಯ್, ಆಲೂರ.

ಸರ್, ನಾನು ಟಿ.ಸಿ.ಹೆಚ್.ಮುಗಿಸಿ ಬಿ.ಇಡಿ. ಮಾಡಬೇಕೆಂದಿದ್ದೇನೆ. ನನಗೀಗ ೨೧ ವರ್ಷ. ಬಿ.ಇಡಿ.ಗೆ ಅರ್ಹತೆಗಳೇನು? ಅಂಚೆ ತೆರಪಿನ ಮೂಲಕ ಆ ಕೋರ್ಸ್ ಮಾಡಬಹುದೆ? ಹಾಗಿದ್ದರೆ ವಿವರವಾಗಿ ತಿಳಿಸಿ.

ನೀವು ಟಿ.ಸಿ.ಹೆಚ್. ಮುಗಿಸಿ ಬಿ.ಎಡ್. ಮಾಡಬೇಕಾದರೆ, ಟಿ.ಸಿ.ಹೆಚ್. ನಂತರ ಪದವಿ ಮಾಡಬೇಕು. ನಿಮಗೀಗ ೨೧ ವರ್ಷವಾಗಿರುವುದರಿಂದ ನೀವು ಅಂಚೆ ತೆರಪಿನ ಶಿಕ್ಷಣದ ಮೂಲಕ ಪದವಿ ಮಾಡಲು ವಯಸ್ಸಿನ ಆಧಾರದ ಮೇಲೆ ಅರ್ಹರಾಗಿದ್ದೀರಿ. ಪದವಿಯ ನಂತರ ಬಿ.ಎಡ್.ಗೆ ಅರ್ಹರಾಗುತ್ತೀರಿ. ನೀವು ಅಂಚೆ ತೆರಪಿನ ಮೂಲಕ ಬಿ.ಎಡ್. ಮಾಡಬಹುದು. ನೀವು ಟಿ.ಸಿ.ಹೆಚ್. ಆಧಾರದ ಮೇಲೆ ಶಿಕ್ಷಕರಾಗಿದ್ದಲ್ಲಿ ಬಿ.ಎಡ್. ಮಾಡಲು ತುಂಬಾ ಅನುಕೂಲವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

Director, Directorate of Distance Education, Annamalai University, Annamalainagar - 608 002

ಧರ್ಮೇಶ್, ಹಾಸನ.

ದ್ವಿತೀಯ ಪಿ.ಯು.ಸಿ. (ವಿಜ್ಞಾನ)ಯಲ್ಲಿ ಫೇಲಾಗಿರುವ ನನಗೆ ೨೧ ವರ್ಷ. ಮೈಸೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎ.ಮಾಡುವ ಆಸೆ. ಎಂ.ಎ. ಯಲ್ಲಿ ಯಾವ ವಿಷಯ ಆರಿಸಿಕೊಳ್ಳಲಿ, ಪರೀಕ್ಷೆಯನ್ನು ಹೇಗೆ ಮತ್ತು ಯಾವಾಗ ತೆಗೆದುಕೊಳ್ಳಬೇಕು, ವಿವರ ನೀಡಿ.

ನಿಮಗೆ ೨೧ ವರ್ಷ ವಯಸ್ಸಾಗಿರುವುದರಿಂದ, ಮೈಸೂರು ವಿಶ್ವವಿದ್ಯಾಲಯದ ಮೂಲಕ ಎಂ.ಎ. ಮಾಡಬಹುದು. ಇದರಲ್ಲಿ ಅನೇಕ ವಿಷಯಗಳಿರುತ್ತವೆ. ಇದರಲ್ಲಿ ತಮ್ಮ ಇಷ್ಟವಾದ ವಿಷಯವನ್ನು ಆರಿಸಿಕೊಳ್ಳಬಹುದು. ಉದಾ: ಕನ್ನಡ, ಇತಿಹಾಸ ಇತ್ಯಾದಿ. ಹೆಚ್ಚಿನ ವಿವರಗಳಿಗೆ ಈ ವಿಳಾಸವನ್ನು ಸಂಪರ್ಕಿಸಿ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬

ಹೆಸರು, ಊರು ಬೇಡ.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 'ಸಿ' ದರ್ಜೆ ನೌಕರನಾಗಿ ಕೆಲಸ ಮಾಡುತ್ತಿರುವ ನನಗೆ ೨೫ ವರ್ಷ. ಪಿ.ಯು.ಸಿ. (ವಿಜ್ಞಾನ)ಯಲ್ಲಿ ತೇರ್ಗಡೆ. ಐ.ಎ.ಎಸ್. ಮಾಡುವ ಛಲ. ಯಾರೋ ಒಬ್ಬರು ೨೫ ವರ್ಷದವರಿಗೆ ನೇರವಾಗಿ ಬಿ.ಎ. ಅಂತಿಮ ವರ್ಷದ ಪರೀಕ್ಷೆಯನ್ನು ಕಟ್ಟಬಹುದೆಂದು ತಿಳಿಸಿದರು. ಹಾಗೆ ಸಾಧ್ಯವೇ? ಅಥವಾ ಬಿ.ಎ. ಮೂರು ವರ್ಷ ಓದಿಯೇ ಐ.ಎ.ಎಸ್. ಪರೀಕ್ಷೆಯನ್ನು ಕಟ್ಟಬೇಕೇ? ಸಲಹೆ ನೀಡಿ.

ವಯಸ್ಸಿನ ಆಧಾರದ ಮೇಲೆ ಬಿ.ಎ.ಯನ್ನು ಪಾಸ್ ಮಾಡಿ, ನಿಮ್ಮ ಇಚ್ಛೆಯಂತೆ ಐ.ಎ.ಎಸ್. ಪರೀಕ್ಷೆಗೆ ಕೂರಬಹುದು.

ಗೀತಾ ದೀಕ್ಷಿತ,

'ಬದುಕಿ'ನ ಮಾರ್ಗದರ್ಶಿಯ ಮಾಹಿತಿಯಂತೆ ವಯಸ್ಸಿನ ಆಧಾರದ ಮೇಲೆ ಅಂಚೆ ತೆರಪಿನ ಮೂಲಕ ಎಂ.ಎ. ಮಾಡಬೇಕೆಂದು ಮೈಸೂರು ವಿಶ್ವವಿದ್ಯಾಲಯಕ್ಕೆ, ಅಣ್ಣಾಮಲೈ ವಿಶ್ವವಿದ್ಯಾಲಯಕ್ಕೆ ಪತ್ರಿಸಿದೆ. ಯಾವುದೇ ಮಾಹಿತಿ ಬರಲಿಲ್ಲ. ಈ ಮಾಹಿತಿ ಪಡೆಯಲು ಏನು ಮಾಡಬೇಕು? ಖುದ್ದಾಗಿ ಸಂಪರ್ಕಿಸಬೇಕೋ ಅಥವಾ ಅದಕ್ಕಾಗಿ ಯಾವ ತಿಂಗಳಲ್ಲಿ ಪತ್ರ ಬರೆದರೆ ಮಾಹಿತಿ ಪಡೆಯಲು ಶಕ್ಯ. ವಿವರವಾಗಿ ತಿಳಿಸಿ.

ಸಾಮಾನ್ಯವಾಗಿ ಆಗಸ್ಟ್ ತಿಂಗಳಲ್ಲಿ ಕೊನೆಯ ದಿನ ಇರುತ್ತದೆ. ನೀವು ಜೂನ್ ಅಥವಾ ಜುಲೈ ತಿಂಗಳಲ್ಲಿ ಸಂಪರ್ಕಿಸಿದರೆ ಮಾಹಿತಿ ಲಭ್ಯವಾಗುತ್ತದೆ. ಆಗಸ್ಟ್ ತಿಂಗಳಲ್ಲಿ ಪ್ರಮುಖ ದಿನ ಪ್ರತಿಕೆಯಲ್ಲಿ ಜಾಹೀರಾತು ನೀಡುತ್ತಾರೆ. ಈ ಹಿಂದೆ ನೀಡಿದ ವಿಳಾಸವನ್ನೇ ಸಂಪರ್ಕಿಸಿ.

ಉಮಾ ಬಿ. ಗುಡಮಾಗಡಿ, ಯಲಬುರ್ಗಾ.

ಪಿ.ಯು.ಸಿ. ಮೊದಲ ವರ್ಷಕ್ಕೆ ಮಾತ್ರ ಓದು ನಿಂತಿತು. ನನಗೆ ಈಗ ೨೪ ವರ್ಷ. ಮುಂದೆ ಓದಬೇಕೆಂದಿದ್ದೇನೆ. ಆದ್ದರಿಂದ ವಯಸ್ಸಿನ ಆಧಾರದ ಮೇಲೆ ಎಂ.ಎ. ಮಾಡಬಹುದೆ ಹಾಗೂ ಅದರಿಂದ ಉದ್ಯೋಗಾವಕಾಶ ಪಡೆಯಬಹುದೆ? ಹಾಗಿದ್ದಲ್ಲಿ ಅವುಗಳ ವಿಳಾಸ ತಿಳಿಸಿ.

ನೀವು ವಯಸ್ಸಿನ ಆಧಾರದ ಮೇಲೆ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎ. ಮಾಡಬಹುದು. ಎಂ.ಎ. ಆಧಾರದ ಮೇಲೆ ಉದ್ಯೋಗ ದೊರೆಯುವ ಸಾಧ್ಯತೆ ಬಹಳ ಕಡಿಮೆ. ಉದ್ಯೋಗ ಅವಕಾಶಗಳಿರುವ ಜಾಬ್ ಓರಿಯಂಟೆಡ್ ಕೋರ್ಸ್ ಅಥವಾ ವಕೇಷನಲ್ ಟ್ರೈನಿಂಗ್ ಕೋರ್ಸ್‌ಗಳನ್ನು ಮಾಡುವುದು ಉತ್ತಮ. ಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿದರೆ ಉದ್ಯೋಗಗಳು ಸುಲಭವಾಗಿ ದೊರೆಯುತ್ತವೆ.

ಶರಣಪ್ಪ ಮಿಣಜಗಿ, ಕುಪ್ಪಿಗುಡ್ಡ ಗ್ರಾಮ.

ಸರ್, ೧೯೯೨ರಲ್ಲಿ ಪಿ.ಯು.ಸಿ. ಕಲಾ ವಿಭಾಗದಲ್ಲಿ ಪ್ರತಿಶತ ೫೦ರಷ್ಟು ಅಂಕ ಪಡೆದಿರುವೆ. ಬಿ.ಎ. ಮುಗಿದಿದೆ. ಎಲ್.ಎಲ್.ಬಿ. ಮಾಡುವ ಆಸೆ. ಪಿ.ಯು.ಸಿ.ಯ ಮೇಲೆ ೧ ಅಥವಾ ೨ ವರ್ಷದ ಅಂಚೆ ಮೂಲಕ ಕಲಿಯುವ ಕೋರ್ಸ್‌ಗಳಿದ್ದರೆ ದಯವಿಟ್ಟು ಸಂಸ್ಥೆಗಳ ವಿಳಾಸ ತಿಳಿಸಿರಿ.

ನೀವು ನಿಮ್ಮ ಆಸೆಯಂತೆ ಎಲ್.ಎಲ್.ಬಿ. ಮಾಡಬಹುದು. ೧ ವರ್ಷದಲ್ಲಿ ಕಲಿಯುವ ಅನೇಕ ಕೋರ್ಸುಗಳು ಅಂಚೆ ತೆರಪಿನ ಶಿಕ್ಷಣದಲ್ಲಿ ಲಭ್ಯ. ಆವಶ್ಯಕವಾಗಿ ಈ ಕೋರ್ಸ್ ಮಾಡಬಹುದು. ಉದಾ : ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಜರ್ನಲಿಸಂ, ಇಂಗ್ಲಿಷ್ ಇತರೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಕರ್ನಾಟಕ ರಾಜ್ಯ ಮುಕ್ತ ಶ್ವವಿದ್ಯಾಲಯ,
ಮಾನಸ ಗಂಗೋತ್ರಿ,
ಮೈಸೂರು - ೫೭೦ ೦೦೬

ಶೌಕತ ಅಲಿ ಅಕ್ಕಿ, ಕೊಪ್ಪಳ.

ಸರ್, ಎಸ್.ಎಸ್.ಎಲ್.ಸಿ.ಯಲ್ಲಿ ಸಾಧಾರಣ ಪಾಸ್ ಆಗಿದ್ದೇನೆ. ನನ್ನ ವಯಸ್ಸು ೨೪, ಅಂಚೆ ತೆರಪಿನ ಮೂಲಕ ಒಂದು ವರ್ಷದ ನೌಕರಿ ಸಿಗುವ ಕೋರ್ಸ್ ಮಾಡಬೇಕೆಂದಿರುವೆ. ಎಷ್ಟು ಖರ್ಚು ಬರುತ್ತೆ? ದಯಮಾಡಿ ತಿಳಿಸಿ.

ತಾವು, ಜ್ಞಾನಾರ್ಜನೆ, ವಿದ್ಯಾಭಿವೃದ್ಧಿಗಾಗಿ ಅಂಚೆ ತೆರಪಿನ ಶಿಕ್ಷಣ ಮುಂದುವರೆಸುವ ಗುರಿ ಹೊಂದಬೇಕು. ನಿಮಗೆ ಉದ್ಯೋಗದ ಅವಶ್ಯಕತೆ ಇದ್ದಲ್ಲಿ ವೃತ್ತಿ ತರಬೇತಿ ಕೋರ್ಸ್ ಮಾಡುವುದು ಒಳಿತು. ಈ ಕೋರ್ಸ್‌ಗಳನ್ನು- ಸರ್ಕಾರ ಮತ್ತು ಸಾರ್ವಜನಿಕ ಸಂಸ್ಥೆಗಳು ನಡೆಸುತ್ತವೆ.

ಕೃಷ್ಣಾ ಜಾದವ, ಊರುಬೇಡ.

ನಾನೀಗ ಓದುತ್ತಿರುವುದು ಬಿ.ಎ. ದ್ವಿತೀಯ ವರ್ಷದಲ್ಲಿ, ಮುಂದೆ ಎಂ.ಎಸ್.ಡಬ್ಲ್ಯೂ. (Master in Social work) ಮಾಡಬೇಕೆಂದು ಬಯಕೆ. ಧಾರವಾಡದಲ್ಲಿ ಅಥವಾ ಬೇರೆಲ್ಲಿ ಈ ಕೋರ್ಸ್ ಇದೆ. ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎಸ್.ಡಬ್ಲ್ಯೂ ಮಾಡಿದರೆ ನೌಕರಿ ಸಿಗುತ್ತದೆಯೇ? ಯಾವ ನೌಕರಿ ಸಿಗಬಹುದು? ನಿಮ್ಮ ಮಾಹಿತಿಯ ನಿರೀಕ್ಷೆಯಲ್ಲಿ.

ಗೆಳತಿ

ಗೆಳತಿ
ಆಗಬೇಕಿದೆ
ನಿನ್ನ ಕಣ್‌ದಾಳಿಗೆ
ಸಿಕ್ಕು
ನರಳಿದವರ
ಗಣತಿ!

-ಸುರೇಶ ವಗ್ಗಾ

ನೀವು ಬಿ.ಎ. ಮುಗಿದ ಮೇಲೆ ಅವಶ್ಯಕವಾಗಿ ಎಂ.ಎಸ್.ಡಬ್ಲ್ಯೂ. (Master in Social work)ನ್ನು ಮಾಡಬಹುದು. ಇದು ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯ. ಇದನ್ನು ಮಾಡಿದರೆ ಸರ್ಕಾರಿ ಕೆಲಸ ಸಿಗಬಹುದು. ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಅಂಚೆ ತೆರಪಿನ ಶಿಕ್ಷಣದಿಂದ ಎಂ.ಎಸ್.ಡಬ್ಲ್ಯೂ. ಮಾಡಬಹುದು.

ಜಗದೀಶ, ಗಂಗಾವತಿ.

ಸರ್, ನಾನು ಈಗ ವಯಸ್ಸಿನ ಆಧಾರದ ಮೇಲೆ ನೇರವಾಗಿ ಎಂ.ಎ. ಮಾಡುತ್ತಿರುವೆ. ಕೆ.ಎ.ಎಸ್. ಪರೀಕ್ಷೆಗೆ ಕೂರಲು ಆಸೆ. ಈಗ ಅರ್ಜಿ ಕರೆದಿರುವುದು ಗೊತ್ತು. ಕೆ.ಎ.ಎಸ್.ಗೆ ಎಷ್ಟು ವರ್ಷಗಳಿಗೊಮ್ಮೆ ಅರ್ಜಿ ಕರೆಯುತ್ತಾರೆ ತಿಳಿಸಿ.

ಕೆ.ಎ.ಎಸ್.ಪರೀಕ್ಷೆಗೆ ಕೂರಲು ಪದವಿ ಅರ್ಹತೆಯಾಗಿರುತ್ತದೆ. ಈ ಪರೀಕ್ಷೆಯನ್ನು ಕರ್ನಾಟಕ ಸರ್ಕಾರದವರು ನಡೆಸುತ್ತಾರೆ. ಪರೀಕ್ಷೆಯನ್ನು ಸರ್ಕಾರ ಮತ್ತು ಕೆ.ಪಿ.ಎಸ್.ಸಿ. ಯನ್ನು ಅವಲಂಬಿಸಿರುತ್ತದೆ.

ಹೆಸರು ಬೇಡ, ದೇಸಾಯಿಕ್ಯಾಂಪ್.

ವಯಸ್ಸು ೧೮. ಪಿ.ಯು.ಸಿ. ಫೇಲ್, ಪಿ.ಯು.ಸಿ. ಆಧಾರದ ಮೇಲೆ ಬಿ.ಎಡ್. (ಹಿಂದಿ) ಮಾಡಲು ಬರುವುದೆ? ಬರುವುದಾದರೆ ಪಿ.ಯು.ಸಿ. ಆಧಾರದ ಮೇಲೆ ಮಾಡಿದ ಆ ಕೋರ್ಸಿನಿಂದ ಸರ್ಕಾರಿ ಉದ್ಯೋಗಗಳು ದೊರೆಯುವವೆ? ತಿಳಿಸಿರಿ.

ಹಿಂದಿ ಬಿ.ಎಡ್. ಮಾಡಲು ನೀವು ಮೊದಲು (ಹಿಂದಿ) ಬಿ.ಎ. ಮಾಡಿರಬೇಕು. ಬಿ.ಎ. (ಹಿಂದಿ) ಮಾಡಿದ್ದರೆ, ಪಿ.ಯು.ಸಿ. ಫೇಲ್ ಆಗಿದ್ದರೂ ಸಹ ಬಿ.ಎಡ್. (ಹಿಂದಿ)ಗೆ ಅರ್ಹರು. ಇದನ್ನು ಮಾಡಿದರೆ ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯ ವೃತ್ತಿ ದೊರೆಯುವ ಅವಕಾಶಗಳಿವೆ.

ಅರವಿಂದ, ಊರು ಬೇಡ.

೧೮ ವರ್ಷದ ನಾನು ಎಸ್.ಎಸ್.ಎಲ್.ಸಿ. ನಂತರ ಅಂಚೆ ತೆರಪಿನ ಶಿಕ್ಷಣದ ಕೋರ್ಸ್‌ಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದೇನೆ. ಯಾವುದಾದರೂ ಒಳ್ಳೆಯ ಕೋರ್ಸಿದ್ದರೆ, ವಿವರ ಮತ್ತು ವಿಳಾಸ ಕೊಡಿ.

ಎಸ್ಸೆಸ್ಸೆಲ್ಸಿಯ ನಂತರ ಅಂಚೆ ತೆರಪಿನ ಶಿಕ್ಷಣದ ಮೂಲಕ ಅನೇಕ ರೀತಿಯ ಪದವಿಗಳು, ಸ್ನಾತಕೋತ್ತರ ಪದವಿಗಳು ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು ಲಭ್ಯ. ಈ ಸಂಬಂಧ ನೀವು ಯಾವುದಾದರೂ ಮುಕ್ತ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ.

ಎಸ್.ಕೆ.ನೀಲಾ, ಬಿಜಾಪುರ.

ವಯಸ್ಸು ೩೯, ಸಿ.ಸಿ.ಟಿ. ಕೋರ್ಸ್ ಮಾಡಿ ಸರಕಾರಿ ಪ್ರೌಢಶಾಲೆಯಲ್ಲಿ ಹೊಲಿಗೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸಿ.ಸಿ.ಟಿ. ನಂತರದ ಕೋರ್ಸ್ ಮಾಡಲು ಮಾರ್ಗದರ್ಶನ ನೀಡಿ. ಒಮ್ಮೆಲೆ ಅಂತಿಮ ವರ್ಷದ ಪದವಿಗೆ ಕೂರಲು ಬರುವುದೇ ತಿಳಿಸಿ. ಪಿ.ಯು.ಸಿ. ಪಾಸಾಗಿರುವೆ.

ನೀವು ಒಮ್ಮೆಲೇ ಅಂತಿಮ ವರ್ಷದ ಪದವಿಗೆ ಕೂರಬಹುದು. ಸಿ.ಸಿ.ಟಿ. ನಂತರದ ಕೋರ್ಸ್‌ಗೆ ಈ ವಿಳಾಸವನ್ನು ಸಂಪರ್ಕಿಸಿ.

SNDT Women's University Churchgate, Bombay.

International Polytechnic for women, New Delhi.

ರೇಷ್ಮಾ ಬಷೀರ್, ಬೆಂಗಳೂರು.


೧೯ ವರ್ಷ. ಪಿ.ಯು.ಸಿ.ಯಲ್ಲಿ ಅನುತ್ತೀರ್ಣ. ನಾನು ಮುಕ್ತ ವಿಶ್ವವಿದ್ಯಾಲಯ (ಅಣ್ಣಾಮಲೈ)ದಲ್ಲಿ ಬಿ.ಬಿ.ಎ./ಬಿ.ಬಿ.ಎಂ. ಕೋರ್ಸ್ ಮಾಡುವ ಆಸಕ್ತಿ ಹೊಂದಿದ್ದೇನೆ. ಹಾಗೆ ಮಾಡಬಹುದೇ? ದಯಮಾಡಿ ತಿಳಿಸಿ.

ನೀವು ಅಗತ್ಯವಾಗಿ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಬಿ.ಬಿ.ಎ./ಬಿ.ಬಿ.ಎಂ. ಕೋರ್ಸ್‌ನ್ನು ಮಾಡಬಹುದು.

ನಾಗರಾಜ ಅ. ರಟ್ಟೀಹಳ್ಳಿ

೨೧ ವರ್ಷದ ಪಿ.ಯು.ಸಿ. (ಜೆ.ಓ.ಸಿ.) ಮುಗಿದಿದೆ. ಬೆರಳಚ್ಚು ಕನ್ನಡ ಮತ್ತು ಇಂಗ್ಲಿಷ್ ಪಾಸು. ಕರಾಸ್ಪಾಂಡೆನ್ಸ್‌ನಲ್ಲಿ ಕನ್ನಡ ಅಥವಾ ಇಂಗ್ಲಿಷ ಶೀಘ್ರಲಿಪಿ ಕಲಿಯಬೇಕೆಂದಿರುವೆ. ಇದಕ್ಕೆ ಅವಕಾಶವಿರುವುದೆ? ವಯಸ್ಸಿನ ಆಧಾರದ ಮೇಲೆ ಒಂದೇ ವರ್ಷಕ್ಕೆ ಡಿಗ್ರಿ ಪಡೆಯಬಹುದೆ? ಹಾಗಿದ್ದರೆ ವಿಳಾಸ ತಿಳಿಸಿ.

ಕನ್ನಡ ಅಥವಾ ಇಂಗ್ಲೀಷ್ ಶೀಘ್ರಲಿಪಿ ಕೋರ್ಸ್‌ನ್ನು ಕರೆಸ್ಪಾಂಡೆನ್ಸ್‌ನಲ್ಲಿ ಕಲಿಯಲು ಅವಕಾಶವಿಲ್ಲ. ವಯಸ್ಸಿನ ಆಧಾರದ ಮೇಲೆ ಒಂದೇ ವರ್ಷದ ಡಿಗ್ರಿ ಪಡೆಯಬಹುದು. ಹೆಚ್ಚಿನ ವಿಷಯಕ್ಕೆ ಉಸ್ಮಾನಿಯ ವಿಶ್ವ



ತೆಗೆದುಕೊಳ್ಳಿ ಈ ಪೆನ್ನು... ವೀರಪ್ಪನ್ ಕಂಪನಿಯವರು ಆನೆ ದಂತದಿಂದ ತಯಾರಿಸಿದ್ದು !!

ವಿದ್ಯಾಲಯ ಹೈದರಾಬಾದ್, ಇವರನ್ನು ಸಂಪರ್ಕಿಸಿ.

ಆರ್. ರಘುನಾಥ, ಬಳ್ಳಾರಿ.

ವಯಸ್ಸು ೨೫, ಎಸ್.ಎಸ್.ಎಲ್.ಸಿ ಪ್ರಥಮ ದರ್ಜೆ. ಪಿ.ಯು.ಸಿ. (ವಿಜ್ಞಾನ) ಫೇಲ್. ವಯಸ್ಸಿನ ಆಧಾರದ ಮೇಲೆ ಅಂಚೆ ಶಿಕ್ಷಣದ ಬಿ.ಎ. ಮಾಡಲು ನಿರ್ಧರಿಸಿದ್ದೇನೆ. ಇದು ಸಾಧ್ಯವೆ? ಸಾಧ್ಯವಿದ್ದರೆ ವಿಳಾಸ ಸಹಿತ ಮಾಹಿತಿ ನೀಡಿ.

ವಯಸ್ಸಿನ ಆಧಾರದ ಮೇಲೆ ನೀವು ಅಂಚೆ ತೆರಪಿನ ಶಿಕ್ಷಣದಲ್ಲಿ ಬಿ.ಎ. ಮಾಡಲು ಸಾಧ್ಯ. ಇದಕ್ಕಾಗಿ ಸಂಪರ್ಕಿಸಿ.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು - ೬.

ಎಸ್.ಎಸ್. ನರಸಯ್ಯ,

ಎಸ್.ಎಸ್.ಎಲ್.ಸಿ. ಪಾಸ್. ೨೨ ವರ್ಷ. ರೆಗ್ಯೂಲರ್ ಆಗಿ ಬಿ.ಎ. ಮಾಡಲು ನಿರ್ಧರಿಸಿದ್ದೇನೆ. ಇದು ಸಾಧ್ಯವೆ? ಯಾವ ವಿಶ್ವ ವಿದ್ಯಾಲಯವನ್ನು ಸಂಪರ್ಕಿಸಬೇಕು.

ನೀವು ರೆಗ್ಯೂಲರ್ ಆಗಿ ಬಿ.ಎ. ಮಾಡಲು ಪಿ.ಯು.ಸಿ. ಅಗತ್ಯ. ಎಸ್ಸೆಸ್ಸೆಲ್ಸಿ ಆಧಾರದ ಮೇಲೆ ರೆಗ್ಯುಲರ್ ಆಗಿ ಬಿ.ಎ. ಮಾಡಲು ಸಾಧ್ಯವಿಲ್ಲ. ಯಾವ ವಿಶ್ವವಿದ್ಯಾನಿಲಯಗಳಲ್ಲೂ ಇದಕ್ಕೆ ಅವಕಾಶವಿಲ್ಲ.

ಜಗದೀಶ್, ತಿಪ್ಟೂರ.

ಪಿ.ಯು.ಸಿ. (ವಾಣಿಜ್ಯ) ಪಾಸು ಮಾಡಿ ೪ ವರ್ಷಗಳು ಆಗಿವೆ. 'ವಿಡಿಯೊಗ್ರಾಫಿ' ತರಬೇತಿಗೆ ಸೇರಲು ಮನಸ್ಸಾಗಿದೆ. ಧಾರಾವಾಹಿ ಮತ್ತು ಸಿನಿಮಾ ವಿಡಿಯೊಗ್ರಾಫಿಗೆ ಸೇರಲು ಏನು ಮಾಡಬೇಕು. ತಿಳಿಸಿ.

ನೀವು ಅಗತ್ಯವಾಗಿ ವಿಡಿಯೋಗ್ರಾಫಿ ತರಬೇತಿಯನ್ನು ಪಡೆಯಬಹುದು. ಇದಕ್ಕಾಗಿ ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಇನ್ ಸಿನಿಮಾಟೋಗ್ರಾಫಿ ಕೋರ್ಸ್ ಸೇರಿ ತರಬೇತಿ ಪಡೆಯಬಹುದು. ಇತರೆ ಖಾಸಗಿ ಫಿಲ್ಮ್ ಇನ್ಸ್ಟಿಟ್ಯೂಟ್‌ನಲ್ಲೂ ಈ ತರಬೇತಿ ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಕೆಳಗಿನ ವಿಳಾಸದಿಂದ ಪಡೆಯಿರಿ.

ಪ್ರಿನ್ಸಿಪಾಲ್, ಎಸ್.ಜೆ. ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.

ಸಿ.ಆರ್. ಧನಂಜಯ ಹೊಯ್ಸಳ, ಹಾಸನ.

ಸರ್, ನನಗೀಗ ೨೦ ವರ್ಷ ಪಿ.ಯು.ಸಿ. ಫೇಲ್, ದಯವಿಟ್ಟು ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ ನೀಡಿ.

೧. ಸಿನಿಮಾ ಛಾಯಾಗ್ರಹಣದ ಅಲ್ಪಾವಧಿ (ಒಂದು ವರ್ಷದ) ಕೋರ್ಸ್ ನೀಡುವ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿರುವವೇ ಅಥವಾ ಕರ್ನಾಟಕದಲ್ಲಿ ಸಿನಿಮಾ ಛಾಯಾ ಚಿತ್ರಣದಲ್ಲಿ ಡಿಪ್ಲೊಮಾ ಪಡೆಯಲು ಯಾವುದಾದರೂ ಸಂಜೆ ಕಾಲೇಜು ಇದ್ದರೆ ತಿಳಿಸಿ.

೨. ಅಂಚೆ ತೆರಪಿನ ಶಿಕ್ಷಣದ ಮೂಲಕ ಸಿನಿಮಾ, ಟಿ.ವಿ.ಗೆ ಸಂಬಂಧಿಸಿದ ಯಾವ ಯಾವ ಕೋರ್ಸ್ ಮಾಡಬಹುದು.

೩. ಡಿಪ್ಲೊಮ ಇನ್ ಫಿಲ್ಮಸ್ಟಡೀಸ್ (ಕಲ್ಕತ್ತ), ಡಿಪ್ಲೊಮಾ ಇನ್ ಫಿಲ್ಮ ಪ್ರೊಸೆಸಿಂಗ್ ಅಂದರೆ ಏನು? ಇವೆರಡು ಏನನ್ನು ಒಳಗೊಂಡಿರುತ್ತವೆ.

೧. ಸಿನಿಮಾ ಛಾಯಾಗ್ರಹಣದ ಡಿಪ್ಲೊಮಾ ಕೋರ್ಸ್ ಕರ್ನಾಟಕದಲ್ಲಿ ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಲಭ್ಯವಿರುತ್ತದೆ. ಇದು ಸಂಜೆ ಕಾಲೇಜುಗಳಲ್ಲಿ ಇಲ್ಲ.

೨. ಸಿನಿಮಾಗೆ ಸಂಬಂಧಿಸಿದ ಶಿಕ್ಷಣ ಅಂಚೆ ತೆರಪಿನ ಮೂಲಕ ದೊರೆಯುವುದಿಲ್ಲ.

೩. ಡಿಪ್ಲೊಮಾ ಇನ್ ಫಿಲಂ ಸ್ಟಡೀಸ್‌ನಲ್ಲಿ ಮುಖ್ಯವಾಗಿ ಈ ಕೆಳಗಿನ ವಿಭಾಗಗಳಲ್ಲಿ ಅಧ್ಯಯನ ಮಾಡಬಹುದು.

ಚಿತ್ರ ನಿರ್ದೇಶನ, ಸಿನಿಮಾಟೋಗ್ರಫಿ, ಸೌಂಡ್ ಇಂಜನಿಯರಿಂಗ್ ಮತ್ತು ಫಿಲಂ ಎಡಿಟಿಂಗ್.

ವೀರಭದ್ರಸ್ವಾಮಿ, ಬಾಸೂರು.

ನಾನು ಬಿ.ಎ. ಪ್ರಥಮ ವರ್ಷದಲ್ಲಿ ಓದುತ್ತಿದ್ದು ನನಗೀಗ ೧೮ ವರ್ಷ. ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ನನಗೆ ಅಭಿನಯದಲ್ಲಿ ತುಂಬಾ ಆಸಕ್ತಿ. ಟಿ.ವಿ. ಧಾರವಾಹಿಗಳಲ್ಲಿ ಪಾತ್ರ ಮಾಡುವ ಆಸೆ. ಯಾರನ್ನು ಭೇಟಿ ಮಾಡಬೇಕು. ವಿಳಾಸ ಮತ್ತು ವಿವರ ತಿಳಿಸಿ. ಹಣವೇನಾದರೂ ಬೇಕಾಗುತ್ತಾ?

ನೀವು ಟಿ.ವಿ. ಧಾರವಾಹಿಗಳಲ್ಲಿ ನಟಿಸಬೇಕಾದರೆ, ಯಾರಾದರೂ ಟಿ.ವಿ. ಧಾರವಾಹಿಯ ನಿರ್ಮಾಪಕ ಅಥವಾ ನಿರ್ದೇಶಕರನ್ನು ಕಂಡು ನಿಮ್ಮ ನಟನೆಯ ಬಗ್ಗೆ ತಿಳಿಸಿ ಉತ್ತಮ ನಾಟಕಗಳಲ್ಲಿ ಮತ್ತು ನಿರ್ದೇಶಕರಲ್ಲಿ ಕೆಲಸ ಮಾಡಿ. ತಮ್ಮ ಪ್ರತಿಭೆಗೆ ತಕ್ಕ ಅವಕಾಶಗಳು ಸಿಗುತ್ತವೆ.

ಜಿ.ಗುರುಪಾದ, ಹುಬ್ಬಳ್ಳಿ.

ಪಿ.ಯು.ಸಿ. ದ್ವಿತೀಯ (ಪಿ.ಸಿ.ಎಂ.ಬಿ.) ಓದುತ್ತಿರುವೆ. ಪಿ.ಯು.ಸಿ. ಆದ ಮೇಲೆ 'ಛಾಯಾಗ್ರಹಣದಲ್ಲಿ ಡಿಪ್ಲೊಮ' ಮತ್ತು 'ನಿರ್ದೇಶನದಲ್ಲಿ ಡಿಪ್ಲೊಮ'ವನ್ನು ಬೆಂಗಳೂರಿನ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಮಾಡಲು ನಿರ್ಧರಿಸಿದ್ದೇನೆ. ಈ ಎರಡನ್ನೂ ಒಂದೇ ಬಾರಿಗೆ ಮಾಡಬಹುದೆ? ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಪಿ.ಯು.ಸಿ.ಯಲ್ಲಿ ಎಷ್ಟು ಅಂಕಗಳನ್ನು ಗಳಿಸಬೇಕು? ಇದನ್ನು ಮಾಡುವುದರಿಂದ ಚಲನಚಿತ್ರರಂಗದಲ್ಲಿ ಒಳ್ಳೆಯ ಅವಕಾಶಗಳಿವೆಯೆ? ವಿವರವಾಗಿ ತಿಳಿಸಿ.

ಛಾಯಾಗ್ರಹಣ ಮತ್ತು ನಿರ್ದೇಶನದಲ್ಲಿ ಡಿಪ್ಲೊಮಾ ಮಾಡುವುದರಿಂದ ಚಲನಚಿತ್ರ ರಂಗದಲ್ಲಿ ಮತ್ತು ಟಿ.ವಿ. ಧಾರಾವಾಹಿಗಳಲ್ಲಿ ಉತ್ತಮವಾದ ಅವಕಾಶಗಳು ಸಿಗುತ್ತವೆ. ಇವು ತುಂಬಾ ಜನಪ್ರಿಯತೆ ಮತ್ತು ಪ್ರತಿಭೆಯನ್ನು ಮೆರೆಸುತ್ತವೆ. ಇದು ಬೆಂಗಳೂರಿನ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಲಭ್ಯವಿರುತ್ತದೆ. ಒಂದೇ ಬಾರಿಗೆ ನಿರ್ದೇಶನ ಮತ್ತು ಛಾಯಾಗ್ರಹಣ ಮಾಡಲು ಸಾಧ್ಯವಿಲ್ಲ. ಹೆಚ್ಚಿನ ಮಾಹಿತಿಗೆ ಎಸ್.ಜೆ. ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲ್‌ರವರನ್ನು ಭೇಟಿ ಮಾಡಿ.

ಸುರೇಶ್ ಹೂಗಾರ, ಕಂದಗನೂರ.

ಸಿನಿಮಾ ಮತ್ತು ಟಿ.ವಿ. ಧಾರಾವಾಹಿಗಳಲ್ಲಿ ಪಾತ್ರವಹಿಸುವ ಆಸೆ, ಇದಕ್ಕಾಗಿ ಯಾರನ್ನು, ಎಲ್ಲಿ ಸಂಪರ್ಕಿಸಬೇಕು? ಧಾರಾವಾಹಿ ನಿರ್ಮಾಣ ಮಾಡಲು ಯಾವ ಬಗೆಯ ಅರ್ಹತೆಗಳು ಬೇಕು? ಮಾಹಿತಿ ನೀಡಿ.

ಸಿನಿಮಾ ಮತ್ತು ಟಿ.ವಿ. ಧಾರಾವಾಹಿಗಳಲ್ಲಿ ಪಾತ್ರ ಮಾಡಲು ಮುಖ್ಯವಾಗಿ ನಟನೆ ಕಲಿತಿರಬೇಕು. ನಾಟಕಗಳಲ್ಲಿ ಅಭಿನಯಿಸಿದ ಅನುಭವವಿದ್ದರೆ ಒಳ್ಳೆಯದು. ಇದರ ಸಂಬಂಧ ಚಲನಚಿತ್ರ/ಟಿ.ವಿ. ಧಾರಾವಾಹಿ ನಿರ್ಮಾಪಕ/ನಿರ್ದೇಶಕರನ್ನು ಭೇಟಿ ಮಾಡಿ. ಇವರು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಸಿಗುತ್ತಾರೆ.

ಗುರುರಾಘವೇಂದ್ರ, ಹಾವೇರಿ.

ಪಿ.ಯು.ಸಿ. (ವಿಜ್ಞಾನ) ದ್ವಿತೀಯ ವರ್ಷದ

ವಿದ್ಯಾರ್ಥಿ. 'ಬಿಸಿಲ ಬದುಕು' ಮಾರ್ಚ್ ತಿಂಗಳ ಸಂಚಿಕೆಯಲ್ಲಿ 'ನೀವು ಟಿ.ವಿ. ಸೇರಬೇಕೆ?' ಎಂಬುದನ್ನು ಓದಿದಾಗ ಕೆಲವು ಅನುಮಾನಗಳು ಮೂಡಿದವು. ಅವು ಹೀಗಿವೆ.

೧. ನಿರ್ದೇಶನ ಮತ್ತು ಚಿತ್ರಕಥೆ ರಚನೆಯ ಡಿಪ್ಲೊಮಾವು ಕರ್ನಾಟಕದಲ್ಲಿ ಇದೆಯೇ?

೨. ಪದವಿ ಆದ ಮೇಲೆ ಮೊದಲ ಸುತ್ತಿನ ಸ್ಪರ್ಧಾತ್ಮಕ ಪರೀಕ್ಷೆಯನ್ನು ಪುಣೆಯವರು ಬೆಂಗಳೂರಿನಲ್ಲಿ ನಡೆಸುವರಂತೆ. ಅದನ್ನು ಕರ್ನಾಟಕದ ಬೇರೆ ಕಡೆ ನಡೆಸುವುದಿಲ್ಲವೆ? ನಡೆಸುವುದಾದರೆ ಎಲ್ಲಿ, ಯಾವಾಗ ನಡೆಸುತ್ತಾರೆ ?

ನನ್ನ ಅನುಮಾನವನ್ನು ಬಗೆಹರಿಸಿ.

ನಿರ್ದೇಶನ ಮತ್ತು ಚಿತ್ರಕಥೆಯ ತರಬೇತಿ ಕೊಡುವ ಖಾಸಗಿ ಸಂಸ್ಥೆ ಕರ್ನಾಟಕದಲ್ಲಿ ಇದೆ. ಅದು ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್, ಬೆಂಗಳೂರು. ಫಿಲ್ಮ್ ಅಂಡ್ ಟೆಲಿವಿಜನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಪೂನಾ ಇವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು, ಮೊದಲ ಸುತ್ತಿನ ಆಯ್ಕೆಯನ್ನು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ಮಾತ್ರ ನಡೆಸುತ್ತಾರೆ. ಬೇರೆ ಕಡೆ ನಡೆಸುವುದಿಲ್ಲ.

ಆರ್. ಸುಮಲತಾ, ಊರುಬೇಡ.

ನಾನು ೧೭ ವರ್ಷದ ಸುಂದರ ಯುವತಿ. ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಮೂರನೆ ವರ್ಷದ ಡಿಪ್ಲೊಮಾ ವಿದ್ಯಾರ್ಥಿನಿ. ಐಶ್ವರ್ಯ ರೈಯವರ ರೀತಿ ಆಗುವ ಆಸೆ. ಮಾಡೆಲ್, ಸೌಂದರ್ಯಸ್ಪರ್ಧೆ, ಟಿ.ವಿ.ಯಲ್ಲಿ ನಿರೂಪಕಿ ಹಾಗೂ ಟಿ.ವಿ.ಯಲ್ಲಿ ಜಾಹೀರಾತಿಗಾಗಿ ಸೇರಲು ತರಬೇತಿಗೊಳಿಸುವ ಸಂಸ್ಥೆಗಳು ಎಲ್ಲಿವೆ? ಹಾಗೆ ಸೇರಲು ಅರ್ಹತೆಗಳೇನಿರಬೇಕು? ದಯವಿಟ್ಟು ಮಾಹಿತಿ ಕೊಡಿ.

ಮಾಡಲ್, ಟಿ.ವಿ.ಯಲ್ಲಿ ನಿರೂಪಕಿಯಾಗಲು, ಜಾಹೀರಾತುಗಳಲ್ಲಿ ಅಭಿನಯಿಸಲು ತರಬೇತಿ ಕೊಡುವಂತಹ ಸಂಸ್ಥೆಗಳು ಯಾವುದೂ ಇರುವುದಿಲ್ಲ. ನೀವು ಸುಂದರವಾಗಿ, ಮಧುರವಾದ ಧ್ವನಿ ಹೊಂದಿದ್ದಲ್ಲಿ ತಮಗೆ ಅವಕಾಶಗಳು ಇರುತ್ತವೆ. ಅನೇಕ ಸಂಘ ಸಂಸ್ಥೆಗಳು, ಸೌಂದರ್ಯ ಸ್ಪರ್ಧೆಗಳನ್ನು ನಡೆಸುತ್ತಾರೆ. ಅಂತಹವರನ್ನು ಭೇಟಿಯಾಗಿ ಅಲ್ಲಿನ ನಿಯಮಗಳನ್ನು ತಿಳಿದು ಭಾಗವಹಿಸಬಹುದು. ಅದೇ ರೀತಿ, ನಗರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿಯೂ ಮತ್ತು ವಿಶ್ವಸುಂದರಿ ಸ್ಪರ್ಧೆಯಲ್ಲೂ ಭಾಗವಹಿಸಿ, ಐಶ್ವರ್ಯರೈಯಂತೆಯೇ ವಿಶ್ವ ಸುಂದರಿಯಾಗಬಹುದು.

ಜಿ.ಗುರುರಾಜ್, ಹುಬ್ಬಳ್ಳಿ

ನಾನು ದ್ವಿತೀಯ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ. ಬೆಂಗಳೂರಿನ ಜಯಚಾಮ ರಾಜೇಂದ್ರ ಪಾಲಿಟೆಕ್ನಿಕ್‌ದಲ್ಲಿ ಛಾಯಾಗ್ರಹಣದ ಡಿಪ್ಲೊಮಾ ಓದಿದರೆ ಚಲನಚಿತ್ರರಂಗದಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಬಹುದೆ? ಛಾಯಾಗ್ರಹಣ, ನಿರ್ದೇಶನ, ಚಿತ್ರಕಥೆ, ಈ ಮೂರರಲ್ಲಿ ಒಮ್ಮೆಲೆ ಡಿಪ್ಲೊಮಾ ಮಾಡಬಹುದೆ? ಬೆಂಗಳೂರಿನಲ್ಲಿದ್ದು ಈ ಕೋರ್ಸ್‌ಗಳು ಮಾಡಬಹುದಾದರೆ ಅಲ್ಲಿ ಹಾಸ್ಟೆಲ್ ಸೌಲಭ್ಯ ಇರುವುದೆ? ಈ ಡಿಪ್ಲೊಮಾಗಳು Under graduate (ಪದವಿಪೂರ್ವ) ಕೋರ್ಸ್ ಎಂದು ನಂಬಿದ್ದೇವೆ. ಹೌದೋ? ಅಲ್ಲವೊ? ತಿಳಿಸಿ. ಇದು ನನ್ನೊಬ್ಬನ ಪ್ರಶ್ನೆಯಲ್ಲ. ನನ್ನ ಅನೇಕ ಸ್ನೇಹಿತರದು ಕೂಡ.

ನೀವು ಬೆಂಗಳೂರಿನ ಜಯಚಾಮ ರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಛಾಯಾಗ್ರಹಣದ ಡಿಪ್ಲೊಮಾ ಓದಿದರೆ ಛಾಯಾಗ್ರಾಹಕರಾಗಿ ಕೆಲಸ ಮಾಡಬಹುದು. ಈ ಕೋರ್ಸ್‌ಗೆ ಸೇರಿದರೆ ಹಾಸ್ಟಲ್ ಸೌಲಭ್ಯ ದೊರೆಯುತ್ತದೆ. ಇದು ಪದವಿಪೂರ್ವ Under graduate ಕೋರ್ಸ್ ಆಗಿರುತ್ತದೆ.

ಅರುಣ, ಸಾಗರ.

ನಾನು ಎರಡನೇ ವರ್ಷದ ಬಿ.ಕಾಂ. ವಿದ್ಯಾರ್ಥಿ. ಮುಂದೆ ಐ.ಸಿ.ಡಬ್ಲ್ಯೂ. ಮಾಡಲು ತೀರ್ಮಾನಿಸಿದ್ದೇನೆ. ಈ ಕೋರ್ಸ್‌ನ್ನು ೨ ಅಥವಾ ೩ ವರ್ಷಗಳಲ್ಲಿ ಮುಗಿಸಬಹುದಾ? ಪೂರ್ಣ ಮಾಹಿತಿಗಾಗಿ ಯಾವ ಸಂಸ್ಥೆಯನ್ನು ಸಂಪರ್ಕಿಸಬೇಕು. ಅದರ ವಿಳಾಸ ಕೊಡಿ.

ನೀವು ಐ.ಸಿ.ಡಬ್ಲ್ಯೂ.ಎ. ಮಾಡಬೇಕಾದಲ್ಲಿ ನಿಮ್ಮ ಹೆಸರನ್ನು ಐ.ಸಿ.ಡಬ್ಲ್ಯೂ.ಎ. ಇನಿಸ್ಟಿಟ್ಯೂಟ್‌ನಲ್ಲಿ ನೊಂದಾಯಿಸತಕ್ಕದ್ದು. ಈ ಕೋರ್ಸ್‌ಗಳನ್ನು ಖಾಸಗಿಯಾಗಿ ಅಥವಾ ರೆಗ್ಯೂಲರ್ ಆಗಿ ಮಾಡಬಹುದು. ಹೆಚ್ಚಿನ ವಿವರಗಳಿಗಾಗಿ

ಐ.ಸಿ.ಡಬ್ಲ್ಯೂ.ಎ. ಇನ್‌ಸ್ಟಿಟ್ಯೂಟ್, ನಂ.೧೨, ಸುಡ್ಡರ್ ಸ್ಟ್ರೀಟ್, ಕಲ್ಕತ್ತ - ೭೦೦ ೦೧೬ ಇವರನ್ನು ಸಂಪರ್ಕಿಸಿ.

ಶಂಕರ್, ಬಿ.ಜಿ.ಹಳ್ಳಿ

ನಾನು ಪಿ.ಯು.ಸಿ. (ವಿಜ್ಞಾನ) ಮುಗಿಸಿರುತ್ತೇನೆ. ಸಿ.ಐ.ಡಿ.ಯಲ್ಲಿ ಇನ್ಸ್‌ಪೆಕ್ಟರ್ ಆಗಬೇಕೆಂದುಕೊಂಡಿದ್ದೇನೆ. ಅದಕ್ಕಾಗಿ ನಾನು ಏನು ಮಾಡಬೇಕು? ದಯವಿಟ್ಟು ವಿವರವಾಗಿ ತಿಳಿಸಿ.

ನೀವು ಸಿ.ಐ.ಡಿ. ಇನ್ಸ್‌ಪೆಕ್ಟರ್ ಆಗಬೇಕಾದಲ್ಲಿ, ಮೊದಲು ನೀವು ಪೋಲೀಸ್ ಇಲಾಖೆ ಸೇರಬೇಕು. ಪೋಲೀಸ್ ಇಲಾಖೆ ಸೇರಲು ಮುಖ್ಯವಾಗಿ ಪದವೀಧರನಾಗಿ ಉತ್ತಮ ದೇಹದಾರ್ಢ್ಯತೆ ಹೊಂದಿರಬೇಕು. ಪೋಲೀಸ್ ಇಲಾಖೆ ನಡೆಸುವ ಸ್ಪರ್ಧಾತ್ಮಕ ಮತ್ತು ಮೌಖಿಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕು.

ಮಹೇಶ್ ಐ.ಕೊಳ್ಳಿ, ಹುಬ್ಬಳ್ಳಿ.

ನಾನು ಡಿ.ಫಾರ್ಮಸಿ ಮಾಡಬೇಕೆಂದಿದ್ದೇನೆ. ಆದರೆ ನಾನು ಪಿ.ಯು.ಸಿ.ಯಲ್ಲಿ ಕಾಮರ್ಸ್ ಅಥವಾ ವಿಜ್ಞಾನ ತೆಗೆದುಕೊಂಡಿಲ್ಲ. ಕಲಾ ವಿಭಾಗದಲ್ಲಿ ಓದುತ್ತಿರುವೆ. ಮುಂದೆ ಬಿ.ಎ. ಮುಗಿಸಿ ಡಿ.ಫಾರ್ಮಸಿ ಅಥವಾ ಬಿ. ಫಾರ್ಮಸಿ ಮಾಡಬಹುದೆ? ಮಾಹಿತಿ ಒದಗಿಸಿ.

ನೀವು ಡಿ.ಫಾರ್ಮಸಿ ಮಾಡಲು ಪಿ.ಯು.ಸಿ.ಯಲ್ಲಿ ವಿಜ್ಞಾನ ಓದಿರಬೇಕು. ಬಿ.ಎ. ಮುಗಿಸಿ ಡಿ.ಫಾರ್ಮಸಿ ಅಥವಾ ಬಿ.ಫಾರ್ಮಸಿ ಮಾಡಲು ಸಾಧ್ಯವಿಲ್ಲ. ಬಿ.ಫಾರ್ಮ ಮಾಡಲು ಡಿ.ಫಾರ್ಮ ಪಾಸಾಗಿರಬೇಕು.

ನಾಗರಾಜ, ಇಟ್ಟಗಿ.

ಸರ್, ದ್ವಿತೀಯ ಪಿ.ಯು.ಸಿ. (ವಿಜ್ಞಾನ) ಆದನಂತರ ಡಿಪ್ಲೊಮಾ ೨ ವರ್ಷ ಎನ್ನುವುದು ನಿಜವೇ? ಅದು. ಹೇಗೆ? ದಯವಿಟ್ಟು ವಿವರವಾಗಿ ತಿಳಿಸಿ.

ಪಿ.ಯು.ಸಿ. (ವಿಜ್ಞಾನ) ಆದ ನಂತರ ಡಿಪ್ಲೊಮಾ ೨ ವರ್ಷ ಮತ್ತು ಡಿಪ್ಲೊಮಾ ಆದ ಮೇಲೆ ಬಿ.ಇ. ಮೂರು ವರ್ಷಗಳೆಂದು ಸರ್ಕಾರ ತೀರ್ಮಾನಿಸಿದೆ. ಆದರೆ ಇದಿನ್ನು ಕಾರ್ಯಗತವಾಗಿಲ್ಲ.

ಎಂ.ಸುನಿತಾ, ರಾಣೆಬೆನ್ನೂರು.

ನಾನು ಬಿ.ಎ. ಎರಡನೇ ವರ್ಷದಲ್ಲಿ ಓದುತ್ತಿರುವೆ. ಐ.ಎ.ಎಸ್. ಪರೀಕ್ಷೆ ಕಟ್ಟಲು ಮೂರನೆ ವರ್ಷದ ಬಿ.ಎ.ಯಲ್ಲಿ ಇದ್ದಾಗ ಬರುವುದೇ ಅಥವಾ ಬಿ.ಎ. ಮುಗಿದ ನಂತರ ಬರುವುದೆ? ಇದಕ್ಕೆ ವಯಸ್ಸು ಎಷ್ಟಿರಬೇಕು. ಈ ಪರೀಕ್ಷೆ ಎಲ್ಲಿ? ಯಾವಾಗ ನಡೆಯುತ್ತವೆ? ತಿಳಿಸಿ.

ಬಿ.ಎ. ಮುಗಿಸಿದ ನಂತರವೇ ಐ.ಎ.ಎಸ್. ಪರೀಕ್ಷೆ ಕಟ್ಟಲು ಸಾಧ್ಯ. ಈ ಐ.ಎ.ಎಸ್. ಪರೀಕ್ಷೆಗೆ ಕನಿಷ್ಟ ವಿದ್ಯಾರ್ಹತೆ ಪದವಿ. ವಯಸ್ಸು ೨೧-೨೬ ವರ್ಷ ಈ ಪರೀಕ್ಷೆಯನ್ನು ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ.)ದವರು ಪ್ರತಿ ವರ್ಷ ನಡೆಸುತ್ತಾರೆ. ಇದರ ಸಂಬಂಧ ಪ್ರಮುಖ ದಿನ ಪತ್ರಿಕೆಗಳಲ್ಲಿ ಮತ್ತು ಎಂಪ್ಲಾಯಿಮೆಂಟ್ ನ್ಯೂಸ್‌ನಲ್ಲಿ ಪ್ರಕಟಣೆಯನ್ನು ಕೊಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ ಪರೀಕ್ಷಾ ಕೇಂದ್ರಗಳಾಗಿರುತ್ತವೆ.

ಪ್ರಭಾಕರ ಕುರಬೆಟ್ಟ, ರಾಯಬಾಗ.

ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿ.ಯು.ಸಿ. ಓದುತ್ತಿರುವೆ. ಮುಂದೆ D.M.S. (Diploma in medicine and surgery) ವೈದ್ಯಕೀಯ ಕೋರ್ಸ್‌ನ್ನು ಮಾಡಬೇಕೆಂದಿದ್ದೇನೆ. ಕೋರ್ಸ್ ಸೇರಲು ಬೇಕಾಗುವ ಅರ್ಹತೆಗಳೇನು? ಕೋರ್ಸಿನ ಅವಧಿಯೇನು? ಯಾವ ವಿಳಾಸಕ್ಕೆ ಸಂಪರ್ಕಿಸಬೇಕು? ಪ್ರವೇಶ ಪಡೆಯಲು ಯಾವ ಬಗೆಯ ಸಿದ್ಧತೆ ಮಾಡಿಕೊಳ್ಳಬೇಕು? ನಿಮ್ಮ ಉತ್ತರದ ನಿರೀಕ್ಷೆಯಲ್ಲಿ.

Diploma in medicine and surgery ಮಾಡಬೇಕಾದರೆ ನೀವು ಯಾವುದಾದರೂ ಹತ್ತಿರದ ವೈದ್ಯಕೀಯ ಕಾಲೇಜ್‌ನ್ನು ಭೇಟಿ ಮಾಡಿ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಬಹುದು.

ಅತ್ತೆ

ನನ್ನ
ಅತ್ತೆ
ಇಂದ
ದಿನವೂ
ನಾನು
ಅತ್ತೆ.

- ಮಹಾದೇವ ಬಸರಕೋಡ

ಎಸ್.ಕೆ. ನಿಂಗರಾವ್, ಚಿಕ್ಕೋಡಿ.

ಪಿ.ಯು.ಸಿ. ದ್ವಿತೀಯ (ವಿಜ್ಞಾನ) ವಿದ್ಯಾರ್ಥಿ. ಮುಂದೆ ಬಿ.ಸಿ.ಎಲ್. (Bachelor in Civil Law) ಕೋರ್ಸಿಗೆ ಸೇರಬೇಕೆಂದಿರುವೆ. ಅದಕ್ಕೆ ಅರ್ಹತೆಗಳೇನು? ಕೋರ್ಸಿನ ಅವಧಿ ಎಷ್ಟು? ಪ್ರವೇಶ ಪಡೆಯಲು ಏನು ಮಾಡಬೇಕು? ಯಾವ ವಿಳಾಸಕ್ಕೆ ಸಂಪರ್ಕಿಸಬೇಕು? ದಯವಿಟ್ಟು ತಿಳಿಸಿ.

ಪಿ.ಯು.ಸಿ. ಆದ ಮೇಲೆ ಐದು ವರ್ಷದ ಎಲ್.ಎಲ್‌ಬಿಗೆ ಸೇರಬಹುದು ಎಲ್.ಎಲ್‌ಬಿಯಲ್ಲಿ ಸಿವಿಲ್ ಲಾ ಆಯ್ಕೆಗೆ ಅವಕಾಶವಿರುತ್ತದೆ. ಇದರ ಸಂಬಂಧ ನಿಮ್ಮ ಹತ್ತಿರದ ಕಾನೂನು ಕಾಲೇಜ್‌ನ್ನು ಸಂಪರ್ಕಿಸಿ.

ಮಮತಾ, ಬಳ್ಳಾರಿ.

ನಾನು ಮೊದಲ ವರ್ಷ ಪಿ.ಯು.ಸಿ. (ಕಾಮರ್ಸ್) ವಿದ್ಯಾರ್ಥಿನಿ. ಪಿ.ಯು.ಸಿ. ಮುಗಿದ ನಂತರ ಬಿ.ಕಾಂ., ಎಂ.ಕಾಂ. ಮತ್ತು ಎಲ್.ಎಲ್‌ಬಿ. ಬಿಟ್ಟರೆ ಬೇರೆ ಇತರ ಯಾವುದೇ ಕೋರ್ಸ್‌ಗಳಿಲ್ಲವೆ? ಬಿ.ಬಿ.ಎಂ. (ಬ್ಯಾಚುಲರ್ ಇನ್ ಬಿಜಿನೆಸ್ ಮ್ಯಾನೇಜ್‌ಮೆಂಟ್) ಮಾಡಬಹುದೆ? ಇದು ಯಾವ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದೆ. ಬಳ್ಳಾರಿಯಲ್ಲಿ ಈ ಕೋರ್ಸ್ ಹೊಂದಿರುವ ಕಾಲೇಜು ಇದೆಯಾ? ಬಿ.ಎ. ಮಾಡಬಹುದೆ? ಮಾರ್ಗದರ್ಶನ ನೀಡಿ.

ನೀವು ಪಿ.ಯು.ಸಿ. (ಕಾಮರ್ಸ್) ಮುಗಿದ ನಂತರ ಅನೇಕ ಕೋರ್ಸ್‌ಗಳನ್ನು ಮಾಡಲು ಅವಕಾಶವಿರುತ್ತದೆ. ಬಿ.ಬಿ.ಎಂ. ಕೋರ್ಸ್ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುತ್ತದೆ. ನೀವು ಬಿ.ಎ. ಸಹ ಮಾಡಲು ಅವಕಾಶವಿದೆ. ಹೆಚ್ಚಿನ ವಿವರಕ್ಕಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ. ಡೈರೆಕ್ಟರ್ ಆಫ್ ಸ್ಟಡೀಸ್. ದಿ ಇನ್ಸಿಟಿಟ್ಯೂಟ್ ಆಫ್ ಚಾರ್ಟಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ನಂ. ೧೨೨, ಮೀನಂಬಕ್ಕಂ ಹೈರೋಡ್, ಪಿ.ಬಿ.ನಂ. ೩೩/೪, ಚೆನ್ನೈ - ೬೦೦ ೦೩೪.

ಭೀಮಣ್ಣ ಎನ್.ಕೆ. ಶೊರಾಪುರ.

ದ್ವಿತೀಯ ವರ್ಷದ (ಕಲಾ) ಪಿ.ಯು.ಸಿ. ವಿದ್ಯಾರ್ಥಿ. ನಾನು ಆದಾಯ ತೆರಿಗೆ ಅಧಿಕಾರಿ

ಯಾಗಬೇಕಾದರೆ ಕನಿಷ್ಟ ಅಂಕಗಳು ಎಷ್ಟು ಗಳಿಸಬೇಕು ಮತ್ತು ಅದರ ಮುಖ್ಯ ಅರ್ಹತೆಗಳೇನು? ದಯಮಾಡಿ ತಿಳಿಸಿ.

ನೀವು ಆದಾಯ ತೆರಿಗೆ ಅಧಿಕಾರಿಯಾಗಲು ಕನಿಷ್ಟ ಯಾವುದಾದರೂ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. ಇದರ ಸಂಬಂಧ ಕೆ.ಪಿ.ಎಸ್.ಸಿ.ಯವರು ಅರ್ಜಿಗಳನ್ನು ಕರೆಯುತ್ತಾರೆ. ಇದಕ್ಕೆ ನಿರ್ದಿಷ್ಟ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಆದರೆ ಹೆಚ್ಚಿನ ಅಂಕ ಪಡೆದವರಿಗೆ ಮಾತ್ರ ಸಂದರ್ಶನಕ್ಕೆ ಕರೆಯುತ್ತಾರೆ.

ಕೇಶವ ಎಸ್.ಕುಲಕರ್ಣಿ, ರಾಯಬಾಗ.

೧. ಬಿ.ಕಾಂ. ಎರಡನೇ ವರ್ಷದಲ್ಲಿದ್ದೇನೆ. ಮುಂದೆ ಸಿ.ಎನ್.ಸಿ. (Computerised Numerical Control) ಕಲಿಯುವ ಇಚ್ಛೆ ವಾಣಿಜ್ಯ ವಿಭಾಗದ ನಾನು ಇದನ್ನು ಸೇರಬಹುದೆ? ಇದಕ್ಕಾಗಿ ಇರುವ ಸಂಸ್ಥೆಗಳಿರುವವೆ?

೨. ಸಿ.ಎನ್.ಸಿ.ಗೆ ಪ್ರವೇಶ ಸಿಗದಿದ್ದರೆ ಎಂ.ಬಿ.ಎ. ಮಾಡಬೇಕೆಂದಿರುವೆ. ಇದರ ಅವಧಿ ಎಷ್ಟು? ಬೇಡಿಕೆ ಇರುವುದೆ? ಮತ್ತು ಈ ಕೋರ್ಸ್ ಮಾಡಲು ಎಷ್ಟು ಖರ್ಚು ತಗಲಬಹುದು? ನಿಮ್ಮ ಉತ್ತರಕ್ಕಾಗಿ ಕಾಯುತ್ತಿದ್ದೇನೆ.

ನೀವು ಬಿ.ಕಾಂ. ಮುಗಿದ ನಂತರ ಸಿ.ಎನ್.ಸಿ. ಕೋರ್ಸ್ ಮಾಡಬಹುದು. ಇದು ೬ ತಿಂಗಳ ಕೋರ್ಸ್ ಆಗಿರುತ್ತದೆ. ಈ ಕೋರ್ಸ್ ಬಗ್ಗೆ ಬೆಂಗಳೂರಿನಲ್ಲಿ ಜಿ.ಟಿ.ಟಿ.ಸಿ., ಇಂಡಸ್ಟ್ರೀಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು ಇಲ್ಲಿ ವಿಚಾರಿಸಿ.

ನೀವು ಬಿ.ಕಾಂ. ನಂತರ ಎಂ.ಬಿ.ಎ. ಮಾಡಬಹುದು. ಇದರ ಅವಧಿ ೨ ವರ್ಷಗಳಾಗಿರುತ್ತವೆ. ಇದಕ್ಕೆ ತಗಲುವ ಖರ್ಚು ನೀವು ಆಯ್ಕೆ ಮಾಡಿಕೊಳ್ಳುವ ಕಾಲೇಜ್‌ನ್ನು ಅವಲಂಬಿಸಿರುತ್ತದೆ. ಸರ್ಕಾರಿ ಕಾಲೇಜ್‌ಗಳಲ್ಲಿ ಖರ್ಚು ಕಡಿಮೆಯಾಗುತ್ತದೆ.

ರಾಕೇಶ್ ಕೆ.ಎಂ., ಬಳ್ಳಾರಿ.

ನಾನು ಬಿ.ಇ. ಮೊದಲ ಸೆಮಿಸ್ಟರಿನಲ್ಲಿ ಓದುತ್ತಿರುವೆ. ನನಗೆ ಪೈಲಟ್ ಆಗಬೇಕೆಂದು ಆಸೆ. ಅದಕ್ಕೆ ಕೆಲವರು ದೃಷ್ಟಿದೋಷವಿರಬಾರದೆಂದು ಹೇಳುತ್ತಾರೆ. ನನಗೆ 'ಸಮೀಪ ದೃಷ್ಟಿದೋಷ' ವಿದೆ. ಪೈಲಟ್ ಆಗಲು ಇದು ತೊಂದರೆಯಾಗುತ್ತದೆಯೇ? ಇಂಜನಿಯರಿಂಗ್‌ನಲ್ಲಿ ಯಾವ ವಿಷಯ ಓದಿದರೆ ಆ ಹುದ್ದೆಗೆ ಅರ್ಹತೆ ಸಿಗುತ್ತೆ? ಬರುವ ವೇತನವೆಷ್ಟು? ಎಷ್ಟು ವರ್ಷಕ್ಕೆ 'ನಿವೃತ್ತಿ' ಎಂದು ಘೋಷಿಸುತ್ತಾರೆ? ದಯವಿಟ್ಟು ಪೂರ್ಣ ಮಾಹಿತಿ ನೀಡಿ.

ದೃಷ್ಟಿ ದೋಷವುಳ್ಳವರು ಪೈಲಟ್ ಆಗಲು ಅರ್ಹರಲ್ಲ. ಪೈಲಟ್‌ಗೆ ಅರ್ಹತೆ ಎಂದರೆ ೧೦+೨ನ್ನು ವಿಜ್ಞಾನದಲ್ಲಿ ಮುಗಿಸಿರಬೇಕು. ಪೈಲಟ್ ಲೈಸನ್ಸ್ ಸರ್ಟಿಫಿಕೇಟ್ ಪರೀಕ್ಷೆ ತೆಗೆದುಕೊಳ್ಳಬೇಕು ಇದಕ್ಕೆ ಉತ್ತಮವಾದ ವೇತನ ಇರುತ್ತದೆ.

ವಿಶ್ವನಾಥ ಎಂ. ಬಾಗೇವಾಡಿ.

ನಾನು ಪಿ.ಯು.ಸಿ. ದ್ವಿತೀಯ (ವಿಜ್ಞಾನ) ಓದುತ್ತಿದ್ದೇನೆ. ಮುಂದೆ ಓದಿದರೂ ಉದ್ಯೋಗ ಸಿಗುವುದಿಲ್ಲವೆಂದುಕೊಂಡು, ನಾನೇ ಸ್ವತಃ ಸಾರ್ವಜನಿಕ ದೂರವಾಣಿ ಕೇಂದ್ರ (S.T.D. Booth) ತೆರೆಯಬೇಕೆಂದು ನಿರ್ಧರಿಸಿರುವೆ. ಇದಕ್ಕೆ ಬೇಕಾಗುವ ಅರ್ಹತೆಗಳೇನು? ಬಂಡವಾಳ ಎಷ್ಟು ಬೇಕು? ಈ ಕುರಿತು ಹೆಚ್ಚಿನ ಸಲಹೆ ನೀಡಿ.

ನೀವು ಸ್ವಂತ ಉದ್ಯೋಗದಲ್ಲಿ ತೊಡಗುತ್ತಿರುವುದು ತುಂಬಾ ಸಂತೋಷ. ನಿಮ್ಮ ವಿದ್ಯಾಭ್ಯಾಸವನ್ನು ಉದ್ಯೋಗದ ಜೊತೆಗೆ ಖಾಸಗಿಯಾಗಿ ಮುಂದುವರೆಸಬಹುದು. ನೀವು ಎಸ್.ಟಿ.ಡಿ. ಬೂತ್ ತೆರೆಯಲು ನಿರ್ದಿಷ್ಟವಾದ ಅರ್ಹತೆಗಳು ಇರುವುದಿಲ್ಲ. ಇದರ ಸಂಬಂಧ ಹತ್ತಿರದ ಟೆಲಿಕಮ್ಯುನಿಕೇಷನ್ ಡಿಪಾರ್ಟ್‌ಮೆಂಟ್‌ನ್ನು ಭೇಟಿ ಮಾಡಿ.

ಅಂದಾನಗೌಡ ಎಸ್.ಗೌಡರ, ನಲ್ಲೂರ.

ಎಸ್.ಎಸ್.ಎಲ್.ಸಿ. ಓದುತ್ತಿರುವೆ. ಚೆನ್ನಾಗಿ ಇಂಗ್ಲಿಷ್ ಬರೆಯಲು ಬರುತ್ತದೆ. ನಮ್ಮ ಮನೆಯಲ್ಲಿ ಮುಂದೆ ಪಿ.ಯು.ಸಿ. (ವಿಜ್ಞಾನ) ಓದೆನ್ನುತ್ತಿದ್ದಾರೆ. ನನಗೆ ಯಾವುದಾದರೂ ಮೆಕ್ಯಾನಿಕಲ್ ಕೋರ್ಸ್ ಓದುವಾಸೆ. ಅಂಥ ಕೋರ್ಸ್‌ಗಳ ವಿವರ ಮತ್ತು ಸಂಸ್ಥೆಗಳ ವಿಳಾಸ ತಿಳಿಸಿ. ನನ್ನ ಮನೆಯವರ ನಿಲುವಿನ ಕುರಿತು ನಿಮ್ಮ ವಿಚಾರವೇನು?

ನಿಮ್ಮ ಆಸೆಯಂತೆ ನೀವು ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಇಂಜನಿಯರಿಂಗ್ ಕೋರ್ಸ್‌ನ್ನು ಮಾಡಬಹುದು. ಇದು ಏಪ್ರಿಲ್/ಮೇ

ತಿಂಗಳಲ್ಲಿ ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಬರುತ್ತದೆ. ನಿಮ್ಮ ಮನೆಯವರ ನಿಲುವಿನ ಬಗ್ಗೆ ನೀವೇ ಅವರ ಜೊತೆ ಸಮಾಲೋಚನೆ ಮಾಡಿ ಒಂದು ನಿರ್ಧಾರ ತೆಗೆದುಕೊಳ್ಳುವುದು ಉತ್ತಮ.

ಎಂ. ರಾಜೇಶ್‌ಕುಮಾರ್, ಬೆಂಗಳೂರು.

ನಾನು ಎಸ್.ಎಸ್.ಎಲ್.ಸಿ. ಪಾಸಾಗಿದ್ದೇನೆ. ಮುಂದೆ ಇನ್ಸ್‌ಪೆಕ್ಟರ್ ಆಗುವ ಬಯಕೆ. ಪಿ.ಯು.ಸಿ. ಓದಲು ಇಷ್ಟವಿಲ್ಲ. ಡಿಪ್ಲೊಮಾದಲ್ಲಿ ಸುಲಭ ಹಾಗು ಬೇಗ ಮುಗಿಯುವ ಕೋರ್ಸ್‌ಗಳಿದ್ದರೆ ದಯವಿಟ್ಟು ತಿಳಿಸಿ.

ಡಿಪ್ಲೊಮಾದಲ್ಲಿ ೩ ವರ್ಷ ಮತ್ತು ೨ ವರ್ಷಗಳ ಕೋರ್ಸ್‌ಗಳು ಲಭ್ಯವಿರುತ್ತವೆ. ಕಷ್ಟಪಟ್ಟಲ್ಲಿ ಎಲ್ಲಾ ಕೋರ್ಸ್‌ಗಳು ಸುಲಭವಾಗುತ್ತವೆ. ನಿಮ್ಮ ಬಯಕೆಯಂತೆ ಯಾವ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗುತ್ತೀರಿ ಎಂದು ತಿಳಿಸಿಲ್ಲ. ಪೊಲೀಸ್ ಇಲಾಖೆಯಲ್ಲಿ ಆದರೆ, ಮೊದಲು ಪದವೀಧರರಾಗಬೇಕು. ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ನಂತರ ಮೌಖಿಕ ಪರೀಕ್ಷೆಯಲ್ಲಿ ಆಯ್ಕೆಯಾಗಬೇಕು.

ರಮೇಶ ನಾಯ್ಕ, ಧೂಪದಹಳ್ಳಿ ತಾಂಡ.

ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಶೇ. ೫೨ರಷ್ಟು ಅಂಕ ಪಡೆದು ಪಾಸಾಗಿದ್ದೇನೆ. ಗಣಿತ, ವಿಜ್ಞಾನ, ಇಂಗ್ಲಿಷ್ ವಿಷಯಗಳಲ್ಲಿ ಪ್ರತಿಶತ ೪೦ ಅಂಕಗಳಿವೆ. ನಂತರ ಐ.ಟಿ.ಐ.ನಲ್ಲಿ 'ವೆಲ್ಡರ್' ತರಬೇತಿ ಮುಗಿಸಿದ್ದೇನೆ. ಮುಂದೆ ನಾನು ಎ.ಎಂ.ಐ.ಇ. ಕೋರ್ಸ್‌ನ್ನು ಮಾಡಬಹುದೆ? ಈ ಕೋರ್ಸಿಗೆ ಅಪ್ರೆಂಟಿಸ್ ಅವಶ್ಯಕವೆ? ನಾನು ಬಿ.ಎಸ್.ಆರ್.ಬಿ. ಪರೀಕ್ಷೆಗೆ ಕೂರಬಹುದೆ? ದಯಮಾಡಿ ಮಾಹಿತಿ ನೀಡಿ.

ನೀವು ಅಗತ್ಯವಾಗಿ ಎ.ಎಂ.ಐ.ಇ. ಕೋರ್ಸ್ ಮಾಡಬಹುದು. ಇದಕ್ಕೆ ಅಪ್ರೆಂಟಿಸ್ ಅವಶ್ಯಕವಲ್ಲ. ನೀವು ಬಿ.ಎಸ್.ಆರ್.ಬಿ. ಗೆ ಕೂರಲು ಎಸ್ಸೆಸ್ಸೆಲ್ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿರಬೇಕು. ನೀವು ಮೀಸಲಾತಿಯಲ್ಲಿ ಬರುವುದಾದರೆ, ನಿಮ್ಮ ಅಂಕಗಳು ಬಿ.ಎಸ್.ಆರ್.ಬಿ.ಗೆ ಕೂರಲು ಸಾಕಾಗುತ್ತವೆ.

ಚಂದ್ರ ಎಂ. ನಾಯ್ಕ ಕುಂದಾಪುರ.

ನಾನು ಪಿ.ಯು.ಸಿ. ಮುಗಿಸಿರುತ್ತೇನೆ. ಐ.ಟಿ.ಐ.ಯಲ್ಲಿ ೬ ತಿಂಗಳ ಅವಧಿಯ 'ಎಲೆಕ್ಟ್ರಿಷಿಯನ್ ಕೋರ್ಸ್' ಪೂರೈಸಿದ್ದೇನೆ. ಆದರೆ ಈ ಕೋರ್ಸ್ ಸಂಪೂರ್ಣವಾಗಿ ಮುಗಿಸಲು ಎಷ್ಟು ಅವಧಿ ಬೇಕಾಗುತ್ತದೆ. ಈ ಕೋರ್ಸನ್ನು ಮಾಡಲು ಸರಕಾರದ ವತಿಯಿಂದ ಉಚಿತ ಊಟ, ವಸತಿ ಸೌಲಭ್ಯವಿರುವ ತರಬೇತಿ ಕೇಂದ್ರಗಳು ದಕ್ಷಿಣ ಕನ್ನಡ ಜಿಲ್ಲೆ ಅಥವಾ ಕರ್ನಾಟಕದಲ್ಲಿ ಇರುವವೇ? ಹಾಗಿದ್ದರೆ ತಿಳಿಸಿ.

"ಎಲೆಕ್ಟ್ರಿಷಿಯನ್ ಕೋರ್ಸ್" ಸಾಮಾನ್ಯವಾಗಿ ೬ ತಿಂಗಳದ್ದಾಗಿರುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಉಚಿತ ಊಟ/ವಸತಿ ಸೌಲಭ್ಯಗಳು ಕೆಲವು ಕಡೆ ಲಭ್ಯವಿರುತ್ತದೆ. ಇತರರಿಗೆ ಅನೇಕ ಸಂಘ ಸಂಸ್ಥೆಗಳು ಇಂತಹ ಅನುಕೂಲಗಳನ್ನು ಒದಗಿಸುತ್ತವೆ. ಈ ಸಂಬಂಧ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಹೊರಡಿಸುತ್ತಾರೆ. ದಿನಪತ್ರಿಕೆಗಳನ್ನು ಗಮನಿಸುವುದು ಒಳ್ಳೆಯದು.

ರಮೇಶ್, ರಾಯಚೂರು.

ನಾನು ಹವ್ಯಾಸಕ್ಕಾಗಿ 'ದ್ವಿಚಕ್ರ ದುರಸ್ತಿ'ಯನ್ನು ಕಲಿಯಬೇಕೆಂದಿರುವೆ. ಅದಕ್ಕಾಗಿ ಬೆಂಗಳೂರಿನಲ್ಲಿ ಯಾವುದಾದರು ಈ ವಿಷಯದ ಮೇಲೆ ತರಬೇತಿ ಕೊಡುವ ನೊಂದಾಯಿತ ಸಂಸ್ಥೆಗಳಿವೆಯೇ ಇದ್ದರೆ ತಿಳಿಸುವಿರಾ?

ನೀವು ಧರ್ಮಸ್ಥಳದ ಸಂಸ್ಥೆಯಾದ "ರೂಡ್‌ಸೆಟ್" ನವರು ನೀಡುವ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಳಾಸವನ್ನು ಸಂಪರ್ಕಿಸಿ.

ಡೈರೆಕ್ಟರ್, ರೂಡ್‌ಸೆಟ್, ಹೌಸಿಂಗ್ ಬೋರ್ಡ್ ಕಾಲೋನಿ, ಎನ್.ಹೆಚ್.೪ ರೋಡ್, ಚಿತ್ರದುರ್ಗ.

ನಾಗಭೂಷಣ ಹಳ್ಳೂರ, ರಟ್ಟೀಹಳ್ಳಿ

೧. ನಾನು ೨೧ ವರ್ಷದವ. ಜೆ.ಓ.ಡಿ.ಸಿ. ಎಲೆಕ್ಟ್ರಿಕಲ್ ಮೊದಲನೇ ತರಗತಿಯಲ್ಲಿ ಪಾಸಾಗಿದ್ದೇನೆ. ನೇರವಾಗಿ ಡಿಗ್ರಿ ಪರೀಕ್ಷೆಗೆ ಕುಳಿತುಕೊಳ್ಳಲು ಸಾಧ್ಯವೆ? ತಿಳಿಸಿರಿ.

೨. ಜೆ.ಓ.ಡಿ.ಸಿ. ಎಲೆಕ್ಟ್ರಿಕಲ್ ನಂತರ ಯಾವ ಕೋರ್ಸ್ ತೆಗೆದುಕೊಂಡು ಓದಿದರೆ ಭವಿಷ್ಯಕ್ಕೆ ಒಳ್ಳೆಯದು.

ನೀವು ಜೆ.ಓ.ಡಿ.ಸಿ. ಆದ ನಂತರ ರೆಗ್ಯುಲರ್ ಡಿಗ್ರಿಗೆ ಸೇರಲು ಅವಕಾಶವಿದೆ. ವಯಸ್ಸಿನ ಆಧಾರದ ಮೇಲೆ ಡಿಗ್ರಿ ಪರೀಕ್ಷೆಗೆ ಖಾಸಗಿಯಾಗಿ ಕೂರಬಹುದು.

ಜೆ.ಓ.ಡಿ.ಸಿ. ನಂತರ ಡಿಪ್ಲೊಮಾ ಇನ್ ಎಲೆಕ್ಟ್ರಿಕಲ್ ಇಂಜನಿಯರ್ ಮಾಡುವುದು ಒಳ್ಳೆಯದು.

ರಾಜಕುಮಾರ ಬಿ. ಅಂಗಡಿ,
ಹಿರೇನಂದಿಹಾಳ

ಐ.ಟಿ.ಐ.ಯ 'ವಿದ್ಯುತ್‌ಕರ್ಮಿ' ವಿಭಾಗದಲ್ಲಿ ಪ್ರತಿಶತ ೭೨ ಅಂಕಗಳನ್ನು ತೆಗೆದುಕೊಂಡು ಪಾಸಾಗಿದ್ದೇನೆ. 'ಅಪ್ರೆಂಟಿಶಿಪ್' ಯಾವ ವಿಭಾಗದಲ್ಲಿ ಮಾಡಿದರೆ ಚೆನ್ನಾಗಿರುತ್ತದೆ. ಅಪ್ರೆಂಟಿಶಿಪ್ ಡಿಗ್ರಿಗೆ ತತ್ಸಮಾನವಾದರೆ ಎಲ್.ಎಲ್.ಬಿ. ಮಾಡಬಹುದೇ? ಎ.ಎಂ.ಐ.ಇ. ಇದರ ವಿಸ್ತೀರ್ಣರೂಪ ತಿಳಿಸಿ.

ನೀವು ಅಪ್ರೆಂಟಿಶಿಪ್‌ನ್ನು ನೀವು ಕಲಿತಿರುವ "ವಿದ್ಯುತ್‌ಕರ್ಮಿ" ವಿಭಾಗದಲ್ಲೇ ಮಾಡಬೇಕು. ಇದು ಡಿಗ್ರಿಗೆ ಸಮಾನವಾಗುವುದಿಲ್ಲ. ಪಿ.ಯು.ಸಿ. ಪಾಸ್ ಮಾಡಿ ನಂತರ ೫ ವರ್ಷಗಳ ಎಲ್.ಎಲ್.ಬಿ. ಮಾಡಬಹುದು. ಎ.ಎಂ.ಐ.ಇ. ಎಂದರೆ ಅಸೋಸಿಯೇಟಡ್ ಮೆಂಬರ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್.

ಜಿ.ಗುರುಪಾದ್, ಹುಬ್ಬಳ್ಳಿ

ನಾನೀಗ ಪಿ.ಯು.ಸಿ. (ವಿಜ್ಞಾನ) ದ್ವಿತೀಯ ವರ್ಷದಲ್ಲಿ ಓದುತ್ತಿರುವೆ. ಮುಂದೆ ಬಿ.ಎಸ್ಸಿ. ನರ್ಸಿಂಗ್ ಅಥವಾ ಬಿ.ಎಸ್ಸಿ. (ಕಂಪ್ಯೂಟರ್ ಸೈನ್ಸ್) ಯಾವುದಾದರೊಂದನ್ನು ಮಾಡಬೇಕೆಂದುಕೊಂಡಿದ್ದೇನೆ. ಇಂತಹ ಡಿಗ್ರಿಗಳನ್ನು ಮಾಡಿ ಎಂ.ಬಿ.ಎ. ಮಾಡಬಹುದೆ? ಬಿ.ಎಸ್ಸಿ. ನರ್ಸಿಂಗ್ ಇದು ಬೇರೆ ಪದವಿಗಳಿಗೆ ತತ್ಸಮವೆ? ಐ.ಐ.ಎಂ.ನಿಂದ ಎಂ.ಬಿ.ಎ. ಮಾಡಬೇಕಾದರೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಗಳೆರಡರಲ್ಲೂ ಶೇ. ೫೦ರಷ್ಟು ಅಂಕಗಳನ್ನು ಗಳಿಸಿರಬೇಕೇ ಅಥವಾ ಒಂದರಲ್ಲಿ ಶೇ. ೫೦ ಬಂದರೆ ಸಾಕೆ? ಪಿ.ಯು.ಸಿ. ಆದ ಮೇಲೆ ಸಿ.ಎ. (ಚಾರ್ಟರ್ಡ್ ಅಕೌಂಟೆಂಟ್) ಬೆಂಗಳೂರಿನಲ್ಲಿ ಮಾಡಬಹುದಂತೆ. ಅದನ್ನು ಮಾಡಲು ಸಿ.ಇ.ಟಿ. ಯಂತಹ ಪ್ರವೇಶ ಪರೀಕ್ಷೆಗಳನ್ನು ಎದುರಿಸ

ಬೇಕೆ? ಎಲ್ಲಕ್ಕೂ ಬೇಸರಿಸದೆ ತಿಳಿಸಿ ಸರ್.

ನೀವು ಬಿ.ಎಸ್ಸಿ. (ಕಂಪ್ಯೂಟರ್ ಸೈನ್ಸ್) ನಂತರ ಎಂ.ಬಿ.ಎ. ಮಾಡಬಹುದು. ಬಿ.ಎಸ್ಸಿ ನರ್ಸಿಂಗ್ ಇದು ಬೇರೆ ಪದವಿಗಳಿಗೆ ಸಮ.

ಸಿ.ಎ. ಮಾಡಲು ಸಿ.ಇ.ಟಿ. ಯಂತಹ ಫೌಂಡೇಶನ್ ಕೋರ್ಸ್ ಪರೀಕ್ಷೆ ಇರುತ್ತದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Institute of Chartered Accountants of India

Indraprasta Marg, New Delhi - 110 002

ಈ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು, ಮಂಗಳೂರಿನಲ್ಲೂ ನಡೆಸಲಾಗುತ್ತದೆ.

ಎಸ್.ಆರ್. ಇನಾಮತಿ, ಯಲಬುರ್ಗಾ


ಸರ್, ನಾನು ಬಿ.ಕಾಂ. ಮೊದಲ ವರ್ಷದ ವಿದ್ಯಾರ್ಥಿ. ಮುಂದೆ ಎಂ.ಬಿ.ಎ. ಮಾಡಬೇಕೆಂದಿರುವೆ. ಎಸ್.ಎಸ್.ಎಲ್.ಸಿ. ಯಲ್ಲಿ ಶೇ.೪೪ ರಷ್ಟು ಹಾಗೂ ಪಿ.ಯು.ಸಿ. (ವಾಣಿಜ್ಯ)ದಲ್ಲಿ ಶೇ. ೪೭ರಷ್ಟು ಅಂಕ ಪಡೆದಿರುವುದರಿಂದ ಪದವಿಯ ನಂತರ ಎಂ.ಬಿ.ಎ. ಮಾಡಬಹುದೆ? ಬಿ.ಕಾಂ. ಮೊದಲ ವರ್ಷದಲ್ಲಿ Company Law & SP ಬದಲಾಗಿ Tax procedure & practices (Vocation Subject) ವಿಷಯವನ್ನು ಆಯ್ದುಕೊಂಡಿದ್ದೇನೆ. ಸಲಹೆ ನೀಡಿ.

ನೀವು ಎಂ.ಬಿ.ಎ. ಮಾಡಲು ಬಿ.ಕಾಂ.ನಲ್ಲಿ ಪಡೆದ ಅಂಕಗಳು ಆಧಾರ ವಾಗುತ್ತವೆ. ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ. ಯಲ್ಲಿ ಪಡೆದ ಅಂಕಗಳು ಯಾವುದೇ ಪರಿಣಾಮ ಉಂಟುಮಾಡುವುದಿಲ್ಲ. ನೀವು ಇದರಲ್ಲಿ ಕಡಿಮೆ ಅಂಕ ಬಂದಿದೆ ಎಂದು ಚಿಂತಿಸುವ ಅವಶ್ಯಕತೆ ಇಲ್ಲ. ಹಾಗಾಗಿ ತಾವು ಬಿ.ಕಾಂ. ನಂತರ ಎಂ.ಬಿ.ಎ. ಮಾಡಬಹುದು.

ಶಿವಪುತ್ರಕುಮಾರ ಪ.ಡಂಗಿ, ಮುಗಳಖೋಡ.

ಬಿ.ಎ. ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನನ್ನ ಐಚ್ಛಿಕ ವಿಷಯಗಳು ಅಪರಾಧಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಇತಿಹಾಸ. ಮುಂದೆ ಪಿ.ಎಸ್.ಐ. ಆಗಬೇಕೆಂದು ನಿರ್ಧಾರ ಮಾಡಿರುವೆ. ಬಿ.ಎ. ಸಾಧಾರಣವಾಗಿ ಪಾಸಾದರೆ ಸಾಕೆ? ಪಿ.ಎಸ್.ಐ.ಗೆ ಸಂಬಂಧಿಸಿದ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಬಹುದೆ? ಆ ಹುದ್ದೆಗೆ ವಯಸ್ಸು ಮತ್ತು ಎತ್ತರ ಎಷ್ಟಿರಬೇಕು. ನಾನು ಈಗ ಓದುತ್ತಿರುವ ವಿಷಯಗಳನ್ನು ಆ ಪರೀಕ್ಷೆಗಳಿಗಾಗಿ ಆಯ್ದುಕೊಳ್ಳಬಹುದೇ?

ನೀವು ಪಿ.ಎಸ್.ಐ. ಆಗಲು ಕನಿಷ್ಟ ಪದವಿ ಸಾಕು. ನೀವು ಆಯ್ದುಕೊಂಡ ವಿಷಯಗಳು ಪಿ.ಎಸ್.ಐ. ಆಗಲು ಸಹಕಾರಿಯಾಗುತ್ತವೆ. ಕಷ್ಟಪಟ್ಟು ಚೆನ್ನಾಗಿ ಓದಿ ಉತ್ತಮ ಅಂಕಗಳನ್ನು ಗಳಿಸುವ ಗುರಿ ಹೊಂದಿ. ಪದವಿಯ ನಂತರ, ಸ್ಪರ್ಧಾತ್ಮಕ ಪರೀಕ್ಷೆಯನ್ನು ಮತ್ತು ದೇಹ ದಾರ್ಢ್ಯತೆ ಪರೀಕ್ಷೆಯನ್ನು ಎದುರಿಸಬೇಕು. ಎತ್ತರ ೧೬೭ ಸಿ.ಎಂ., ತೂಕ ೫೦ ಕೆ.ಜಿ. ಇರಬೇಕು. ಎನ್.ಸಿ.ಸಿ. ಮತ್ತು ಕ್ರೀಡೆಗಳಲ್ಲಿ ಭಾಗವಹಿಸಿದ್ದರೆ ಅನುಕೂಲ.



ಕೆಲಸವೇ ಮಾಡದವರಿಗೆ ವಾರಕ್ಕೆ ಎಷ್ಟು ದಿನ ವಾದರೇನು..?

ಲತಾ, ಮೈಸೂರು.

ನಾನು ಬಿ.ಎಸ್ಸಿ. ಪದವೀಧರೆ Marine Radio of Licer Courseಗೆ ಸೇರಲು ಬಯಸುತ್ತೇನೆ. ಈ ಕೋರ್ಸ್ ಮಾಡಿದರೆ ಕೆಲಸ ಸಿಗುತ್ತದೆಯೇ? ಇದಕ್ಕೆ ವಯೋಮಿತಿ ಎಷ್ಟು? ಮಾಹಿತಿಗಾಗಿ ಯಾರನ್ನು ಸಂಪರ್ಕಿಸಬೇಕು? ತಿಳಿಸಿ.

Marine Radio of Licer Course ಮಾಡಿದರೆ ಉತ್ತಮವಾದ ಕೆಲಸ ಸಿಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ವಿಳಾಸವನ್ನು ಸಂಪರ್ಕಿಸಿ. ಅಥವಾ ಇವರ ಜಾಹೀರಾತನ್ನು ಗಮನಿಸಿ. Ministry of Surface Transport, Directorate of General Shipping, Bombay

ಬಾಬು, ಹರಪನಹಳ್ಳಿ

ನಾನು ಹತ್ತನೆ ತರಗತಿಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣನಾಗಿದ್ದೇನೆ. ಪಿ.ಯು.ಸಿ. (ವಿಜ್ಞಾನ) ಫೇಲ್. ನನಗೀಗ ೧೮ ವರ್ಷ. ಆರ್.ಟಿ.ಓ.ನಲ್ಲಿ ಬ್ರೇಕ್ ಇನ್ಸ್‌ಪೆಕ್ಟರ್ ಆಗಬೇಕೆಂದಿರುವೆ. ಅದಕ್ಕಾಗಿ ಏನು ಓದಬೇಕು. ದೈಹಿಕ ಮಟ್ಟ ಮತ್ತು ಎತ್ತರ ಎಷ್ಟಿರಬೇಕು. ದಯಮಾಡಿ ತಿಳಿಸಿ.

ನೀವು ಆರ್.ಟಿ.ಓ.ನಲ್ಲಿ ಬ್ರೇಕ್ ಇನ್ಸ್‌ಪೆಕ್ಟರ್ ಆಗಬೇಕಾದರೆ ಡಿಪ್ಲೊಮಾ ಇನ್ ಆಟೋಮೋಬೈಲ್ ಅಥವಾ ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಇಂಜನಿಯರಿಂಗ್ ಮಾಡಬೇಕು. ಇದು ೩ ವರ್ಷದ ಕೋರ್ಸ್ ಆಗಿರುತ್ತದೆ. ಇದಕ್ಕೆ ದೈಹಿಕ ಮಟ್ಟ ೧೬೭ ಸೆಂ.ಮೀ. ಮತ್ತು ತೂಕ ೫೦ ಕೆ.ಜಿ. ಇರಬೇಕು.

ಎಂ. ಬಸವರಾಜ, ಕೆರೆಕೆರೆ ಸೋಮಲಾಪುರ.

ಸರ್, ನನಗೆ ೨೨ ವರ್ಷ. ಎಸ್.ಎಸ್.ಎಲ್.ಸಿ. ಮುಗಿಸಿ ನನ್ನ ಆಸಕ್ತಿಯ ಚಿತ್ರಕಲೆಯನ್ನು ಅಭ್ಯಸಿಸಬೇಕಿತ್ತು. ಕಾರಣಾಂತರಗಳಿಂದ ಪಿ.ಯು.ಸಿ. ಸೇರಿ, ಹಾಗೆ ಬಿ.ಎ.ಗೂ ಸೇರಿ ಬಿ.ಎ. ಅಂತಿಮ ವರ್ಷದ ಪರೀಕ್ಷೆಗೆ ಕೂರಲಿಲ್ಲ. ಮತ್ತೆ ಚಿತ್ರಕಲೆಯ ಹುಚ್ಚು ಹಿಡಿದು ಬಳ್ಳಾರಿಯ 'ಭವಾನಿ ಲಲಿತ ಕಲಾ ಮಹಾವಿದ್ಯಾಲಯ'ದಲ್ಲಿ ಡಿ.ಎಂ.ಸಿ.ಗೆ ಸೇರಿರುವೆ. ಅದರಲ್ಲಿ ೨ ಮತ್ತು ೫ ವರ್ಷದ ಕೋರ್ಸ್ ಉಂಟು. ಇವೆರಡರಲ್ಲಿ ಯಾವುದು ಮಾಡಿದರೆ ಭವಿಷ್ಯಕ್ಕೆ ಒಳ್ಳೆಯದು. ಡಿ.ಎಂ.ಸಿ., ಎ.ಎಂ., ಜಿ.ಡಿ. ಮುಗಿಸಿದರೆ ನೌಕರಿ ಸಿಗಬಹುದೆ? ತಿಳಿಸಿ.

ನೀವು ಕಲೆಯಲ್ಲಿ ಇರುವ ಆಸಕ್ತಿಯಿಂದ ಡಿ.ಎಂ.ಸಿ.ಗೆ ಸೇರಿದ್ದೀರಿ. ಇದು ಡಿಪ್ಲೊಮಾ ಕೋರ್ಸ್ ಆಗಿರುತ್ತದೆ. ೨ ವರ್ಷದ ಕೋರ್ಸ್ ಮಾಡಿದರೆ ನೀವು ಶಾಲೆಗಳಲ್ಲಿ ಡ್ರಾಯಿಂಗ್ ಟೀಚರ್ ಆಗಿ ಕೆಲಸ ಮಾಡಬಹುದು. ೫ ವರ್ಷದ ಕೋರ್ಸ್ ಮಾಡಿದರೆ ಅದರಿಂದ ನಿಮ್ಮ ಭವಿಷ್ಯವೇ ಬದಲಾಗಬಹುದು. ಚಿತ್ರಕಲೆಯು ಅನೇಕ ಅವಕಾಶಗಳನ್ನು ಉತ್ತಮ ಆದಾಯವನ್ನು ತರಬಲ್ಲವು.

ಶ್ವೇತ, ಹೊಸಬಾಳೆ.

ಪ್ರಥಮ ಪಿ.ಯು.ಸಿ. (ಕಲಾ) ಓದುತ್ತಿರುವೆ. 'ಜರ್ನಲಿಸಂ' ಮಾಡುವ ಆಸೆ ಇದೆ. ಇದಕ್ಕೆ ಅರ್ಹತೆಗಳೇನು? ಯಾವಾಗ ಮಾಡಿ

ದರೆ ಒಳ್ಳೆಯದು? ಈ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆಯೇ? ಈ ಕುರಿತು ಹೆಚ್ಚಿನ ಮಾಹಿತಿ ಒದಗಿಸಿ.

ಪಿ.ಯು.ಸಿ. ನಂತರ ತಾವು "ಜರ್ನಲಿಸಂ" ಮಾಡಬಹುದು. ಆದರೆ ಪದವಿಯ ನಂತರ ಮಾಡುವುದು ಉತ್ತಮ. ಹೆಚ್ಚಿನ ಮಾಹಿತಿಗಾಗಿ ಈ ವಿಳಾಸವನ್ನು ಸಂಪರ್ಕಿಸಿ. ಉಸ್ಮಾನಿಯ ಯೂನಿವರ್ಸಿಟಿ, ಹೈದರಾಬಾದ್.

ಶಿವಾನಂದ ಎಸ್. ಕಂಚ್ಯಾಣಿ, ಮುದ್ದೇಬಿಹಾಳ.

ನಾನು ಎಸ್.ಎಸ್.ಎಲ್.ಸಿ. ಪಾಸಾಗಿರುತ್ತೇನೆ. ವಿಜ್ಞಾನ ಕಲಿಯಲು ಆಸಕ್ತಿ, ವಿಜ್ಞಾನ ಕಲಿತು ಮಿಲ್ಟ್ರಿ ಸೇರಲು ಆಸೆ. ಎತ್ತರ, ತೂಕ ಮತ್ತಿತರ ನಿಯಮಗಳನ್ನು ತಿಳಿಸಿ.

ಪಿ.ಯು.ಸಿ. (ವಿಜ್ಞಾನ) ನಂತರ ಮಿಲ್ಟ್ರಿ ಸೇರಬಹುದು. ಇದಕ್ಕೆ ಅರ್ಹತೆ ಎಂದರೆ ಎತ್ತರ ೧೫೭ ಸೆಂ.ಮಿ. ಮತ್ತು ತೂಕ ೫೦ ಕೆ.ಜಿ. ಇದರ ಆಯ್ಕೆ ಅನೇಕ ಪ್ರಮುಖ ನಗರಗಳಲ್ಲಿ ನಡೆಯುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ಪ್ರಕಟಣೆಗಳನ್ನು ಗಮನಿಸತಕ್ಕದ್ದು.

ಶಿವಾನಂದ ಎಸ್.ಕತ್ತಿ

ಕೈಗಾರಿಕೆ ತರಬೇತಿ ಸಂಸ್ಥೆಯಲ್ಲಿ (ಜಿ.ಓ.ಡಿ.ಸಿ.) 'ವಿದ್ಯುತ್ ಕರ್ಮಿ' ತರಬೇತಿಯ ದ್ವಿತೀಯ ವರ್ಷದಲ್ಲಿ ಪಾಸಾಗಿರುತ್ತೇನೆ. ಇದು ಮುಗಿದ ನಂತರ ಯಾವ ಹುದ್ದೆ ಸಿಗಬಹುದು? ಅಪ್ರೆಂಟಿಶಿಪ್ ಎಷ್ಟು ವರ್ಷದ ಕೋರ್ಸ್? ತಿಳಿಸಲು ಕೋರಿಕೆ.

ನೀವು (ಜಿ.ಓ.ಡಿ.ಸಿ) "ವಿದ್ಯುತ್ ಕರ್ಮಿ" ತರಬೇತಿಯನ್ನು ಪಡೆದಿರುತ್ತೀರಿ. ಇದರಿಂದ ಕರ್ನಾಟಕ ವಿದ್ಯುತ್ ಇಲಾಖೆ, ಕಾರ್ಖಾನೆಗಳಲ್ಲಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಸಿಗಬಹುದು. 'ಅಪ್ರೆಂಟಿಶಿಪ್' ಒಂದು ವರ್ಷದ ಕೋರ್ಸ್.

ಸಚಿನ್ ನಾಯಕ್, ಕಾರವಾರ.

ನಾನು ಹಿಂದುಳಿದ ವರ್ಗದ ಬಡ ವಿದ್ಯಾರ್ಥಿ. ಪ್ರಥಮ ಬಿ.ಕಾಂ. ಓದುತ್ತಿರುವುದು. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರತಿಶತ ೪೮ ಅಂಕಗಳನ್ನು, ಪಿ.ಯು.ಸಿ.ಯಲ್ಲಿ ೪೫ ಪ್ರತಿಶತ ಅಂಕಗಳನ್ನು ಪಡೆದಿರುವೆ. ಪತ್ರಕರ್ತನಾಗಲು ಆಸೆ. ಅದಕ್ಕೆ ಅರ್ಹತೆ, ತಗಲುವ ಖರ್ಚು, ಉತ್ತರ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ ಸಂಬಂಧಪಟ್ಟ ಕಾಲೇಜು ಇರುವವೆ? ತಿಳಿಸಿ. ಮತ್ತೆ ನಾನು ವಾಣಿಜ್ಯ ವಿದ್ಯಾರ್ಥಿಯಾದ್ದರಿಂದ ಈ ಕೋರ್ಸಿಗೆ ಸೇರಲು ಅರ್ಹನೆ. ಇದನ್ನು ಕಲಿಯುವಾಗ ಸರ್ಕಾರದಿಂದ ಏನಾದರೂ ನೆರವು ದೊರಕೀತೆ? ಇದು ಎಷ್ಟು ವರ್ಷದ ಕೋರ್ಸ್ ಸವಿವರವಾಗಿ ತಿಳಿಸಿ.

ನೀವು ಅಗತ್ಯವಾಗಿ ಜರ್ನಲಿಸಂ ಕಲಿಯಬಹುದು. ದಾರವಾಡ ಅಥವಾ ಮಂಗಳೂರು ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ. ಹಿಂದುಳಿದ ವರ್ಗದವರಾದರೆ ಸರ್ಕಾರದಿಂದ ವಿದ್ಯಾರ್ಥಿ ವೇತನ ದೊರೆಯುತ್ತದೆ.

ಮಂಜುನಾಥ, ಬಳ್ಳಾರಿ.

ಸರ್, ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಶೇ. ೬೮ರಷ್ಟು ಅಂಕಗಳಿಸಿದ್ದು, ಈಗ ಪ್ರಥಮ ಪಿ.ಯು.ಸಿ.(ವಿಜ್ಞಾನ)ಯಲ್ಲಿ ಓದುತ್ತಿದ್ದೇನೆ. ಓದಲು ಆಸಕ್ತಿ ಇಲ್ಲ. ಪಿ.ಯು.ಸಿ. (ಪಾಸ್/ಫೇಲ್)ಯಲ್ಲಿ ಏನಾದರೂ ಆಗಲಿ ಮುಂದೆ ಅಗ್ರಿಕಲ್ಚರ್ ಕುರಿತು ಓದುವ ಆಸೆ. ಅಂಥ ಸಂಸ್ಥೆಗಳು ಎಲ್ಲಿವೆ? ಪ್ರವೇಶ ಪಡೆಯುವುದು

ಹೇಗೆ? ಇದಲ್ಲದೆ ನನಗೆ ರೈಲ್ವೆ ಡಿಪಾರ್ಟ ಮೆಂಟಲ್ಲಿ ಕೆಲಸ ಮಾಡಬೇಕೆಂಬ ಆಸೆ. ಅದಕ್ಕೆ ಶೈಕ್ಷಣಿಕ ಅರ್ಹತೆಗಳೇನು ಬೇಕು? ತಿಳಿಸಿ.

ನೀವು ಜಾಬ್ ಓರಿಯಂಟೆಡ್ ಕೋರ್ಸ್ (ಜೆ.ಓ.ಸಿ.) ಇನ್ ಅಗ್ರಿಕಲ್ಚರ್ ಓದಬಹುದು. ಈ ಕೋರ್ಸ್ ಅನೇಕ ಪದವಿ ಪೂರ್ವ ಕಾಲೇಜ್‌ಗಳಲ್ಲಿ ದೊರೆಯುತ್ತದೆ. ನೀವು ಹತ್ತಿರದ ಜ್ಯೂನಿಯರ್ ಕಾಲೇಜ್‌ನ್ನು ಸಂಪರ್ಕಿಸಿ. ರೈಲ್ವೆ ಇಲಾಖೆಯಲ್ಲಿ ಎಸ್ಸೆಸ್ಸೆಲ್ಸಿ ಆಧಾರದ ಮೇಲೆ ಕೆಲಸಕ್ಕೆ ಸೇರಬಹುದು. ರೈಲ್ವೆ ಮಂಡಳಿ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುತ್ತಾರೆ. ಆಗ ಅರ್ಜಿ ಸಲ್ಲಿಸಿ, ಲಿಖಿತ ಪರೀಕ್ಷೆಯಲ್ಲಿ ಪಾಸ್ ಆಗಬೇಕು. ನಂತರ ಮೌಖಿಕ ಪರೀಕ್ಷೆಯನ್ನು ಪಾಸ್ ಮಾಡಬೇಕು.

ಸುನೀಲ ಎಚ್., ಹೊಸಕೋಟೆ.

ಪಿ.ಯು.ಸಿ. ಕಲಾ ವಿಭಾಗದಲ್ಲಿ ಪಾಸು. ಮುಂದೆ ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆಯಬೇಕೆಂದು ತೀರ್ಮಾನಿಸಿ ಅದರ ಪ್ರವೇಶ ಪರೀಕ್ಷೆಗೆ ಸಿದ್ಧನಾಗಿದ್ದೇನೆ. ಪ್ರವೇಶ ಪರೀಕ್ಷೆ ಕರ್ನಾಟಕದಲ್ಲಿ ನಡೆಸಲಾಗುವುದೋ ಅಥವಾ ಬೇರೆ ರಾಜ್ಯದಲ್ಲೋ? ಆರ್ಥಿಕ ದುರ್ಬಲತೆಯಿಂದ ಈ ಪ್ರಶ್ನೆ ಕೇಳುತ್ತಿರುವೆ. ದಯಮಾಡಿ ತಿಳಿಸಿ.

ಹೊಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಮಾಡಲು ಅದಕ್ಕಾಗಿ ನಡೆಯುವ ಪ್ರವೇಶ ಪರೀಕ್ಷೆಯು ಬೆಂಗಳೂರಿನಲ್ಲಿ ನಡೆಯುತ್ತದೆ. ನೀವು ಬೆಂಗಳೂರಿನಲ್ಲೇ ಪರೀಕ್ಷೆ ತೆಗೆದುಕೊಳ್ಳಬಹುದು.

ಹನುಮೇಶ್, ಎಲಿವಾಳ.

ಸರ್, ಎಸ್.ಎಸ್.ಎಲ್.ಸಿ. ಓದುತ್ತಿದ್ದು, ನಂತರ ಡಿಪ್ಲೊಮಾ ಮೆಕ್ಯಾನಿಕಲ್ ಅಥವಾ ಕಂಪ್ಯೂಟರ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಷನ್ ಕೋರ್ಸ್ ಇವುಗಳಲ್ಲಿ ಯಾವುದಾದರೊಂದು ಕೋರ್ಸ್‌ನ್ನು ತೆಗೆದು ಕೊಳ್ಳಬೇಕೆಂದುಕೊಂಡಿರುವೆ. ಇದಕ್ಕೆ ಪಿ.ಯು.ಸಿ. ಆಗಬೇಕೆ ಅಥವಾ ಎಸ್.ಎಸ್.ಎಲ್.ಸಿ. ಅಷ್ಟೇ ಸಾಕೆ? ಮೇಲೆ ತಿಳಿಸಿದ ಮೂರು ಕೋರ್ಸ್‌ಗಳಲ್ಲಿ ಯಾವುದನ್ನು ಆಯ್ದು ಕೊಂಡರೆ ಹೆಚ್ಚು ಉದ್ಯೋಗಾವಕಾಶಗಳಿವೆ? ದಯವಿಟ್ಟು ತಿಳಿಸಿರಿ.

ಡಿಪ್ಲೊಮಾ ಕೋರ್ಸ್ ಮಾಡಲು ಎಸ್ಸೆಸ್ಸೆಲ್ಸಿ ಸಾಕು. ಕಂಪ್ಯೂಟರ್ಸ್ ವಿಭಾಗದಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳಿವೆ. ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಸಹ ಉತ್ತಮ ಉದ್ಯೋಗ ದೊರೆಯುವಂತಹ ಕೋರ್ಸ್ ಆಗಿರುತ್ತದೆ.

ಸುನೀತಾ ಬಿ. ಕುಲಕರ್ಣಿ, ಗಂಗಾವತಿ.

ನಾನು ಪ್ರಥಮ ಪಿ.ಯು.ಸಿ. (ಕಲಾ) ವಿಭಾಗದ ವಿದ್ಯಾರ್ಥಿನಿ. ಬ್ರಾಹ್ಮಣ ವರ್ಗಕ್ಕೆ ಸೇರಿರುವ ನನಗೆ ಟಿ.ಸಿ.ಹೆಚ್. ಸೇರಲು ಎಷ್ಟು ಅಂಕಗಳನ್ನು ಗಳಿಸಬೇಕಾಗುತ್ತದೆ? ಸರಕಾರಿ ಟಿ.ಸಿ.ಹೆಚ್.ಗೆ ನಿಯಮಗಳೇನು? ಸಲಹೆ ಕೊಡಿ.

ಸರ್ಕಾರಿ ಟಿ.ಸಿ.ಹೆಚ್.ಗೆ ಸೇರಲು ತಾವು ಕಲಾ ವಿಭಾಗದಲ್ಲಿ ಉತ್ತಮ ಅಂಕಗಳನ್ನು ತೆಗೆಯಬೇಕು. ಸರ್ಕಾರದ ನಿಯಮಗಳೆಂದರೆ ಮಹಿಳೆಯರಿಗೆ ಶೇ. ೫೦ರಷ್ಟು ಸೀಟು ಮೀಸಲಿಡುತ್ತಾರೆ. ಸರ್ಕಾರದ ನಿಯಮಾನುಸಾರ ಸೀಟು ಹಂಚಿಕೆಯಾಗುತ್ತದೆ.

ಹುಲಗೇಶ್ ಹೆ. ಗುರಿಕಾರ.

ಈಗ ಪಿ.ಯು.ಸಿ. ಮೊದಲ ವರ್ಷದ ವಿದ್ಯಾರ್ಥಿ. ಮುಂದೆ ಕಂಡಕ್ಟರ್ ಆಗಬೇಕೆಂದಿರುವೆ. ತಕ್ಕ ಅರ್ಹತೆಯ ಬಗ್ಗೆ ಮಾಹಿತಿ ಒದಗಿಸಿ.

ಕಂಡಕ್ಟರ್ ಆಗಲು ತಾವು ಫಸ್ಟ್ ಏಡ್ ಸರ್ಟಿಫಿಕೇಟನ್ನು ಡಾಕ್ಟರ್ ಕಡೆಯಿಂದ ಮಾಡಿಸಬೇಕು. ನಂತರ ಕಂಡಕ್ಟರ್ ಸರ್ಟಿಫಿಕೇಟ್‌ನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆದುಕೊಳ್ಳಬೇಕು.

ರಾಜೇಶ್ವರಿ ಬೈಲಹೊಂಗಲ

ಈಗ ಓದುತ್ತಿರುವುದು ಪಿ.ಯು.ಸಿ ಎರಡನೆ ವರ್ಷದಲ್ಲಿ. ಪರೀಕ್ಷೆಯಲ್ಲಿ ಪ್ರತಿಶತ ೮೦ ಕ್ಕಿಂತ ಹೆಚ್ಚು ಗುಣಗಳಿಂದ ಪಾಸಾಗುವ ನಿರೀಕ್ಷೆಯಿದೆ. ಮುಂದೆ 'Solar energy' ಬಗ್ಗೆ ಡಿಗ್ರಿ ಪಡೆಯಬೇಕೆಂದು ಬಯಸಿದ್ದೇನೆ. ಬಿ.ಎಸ್ಸಿ. ಆದ ನಂತರ ಈ ಕೋರ್ಸ್ ಇದೆಯೋ ಅಥವಾ ಈಗಲೇ ಅಭ್ಯಾಸ ಮಾಡಬಹುದೊ? ಡಿಗ್ರಿ ನಂತರದಲ್ಲಾದರೆ ಯಾವ ವಿಶ್ವವಿದ್ಯಾಲಯದಲ್ಲಿ, ಯಾವ ವಿಷಯದಲ್ಲಿ ಪಾಸು ಆಗಿರಬೇಕು? ಎಲ್ಲದಕ್ಕೆ ವಿವರವಾಗಿ ತಿಳಿಸ್ತೀರಾ ಸರ್?

ನೀವು ಪದವಿಯಲ್ಲಿ ಸೋಲಾರ್ ಎನರ್ಜಿಯನ್ನು ಒಂದು ವಿಷಯವಾಗಿ ಓದಬಹುದು. ನಂತರ ಅದರಲ್ಲಿಯೇ ಉನ್ನತ ವ್ಯಾಸಂಗ (ರೀಸರ್ಚ್) ಮಾಡಬಹುದು.

ಎಚ್.ಆರ್. ಕಡಿವಾಲ ತೆಗ್ಗಿ, ಬದಾಮಿ.

ಪ್ರಥಮ ಪಿ.ಯು.ಸಿ. ಕಲಾವಿಭಾಗದಲ್ಲಿ ಓದುತ್ತಿರುವೆ. ಪ್ರಾಥಮಿಕ ಶಾಲೆಯ ಶಿಕ್ಷಕ ನಾಗಬೇಕಾದರೆ ದ್ವಿತೀಯ ಪಿ.ಯು.ಸಿ.ಯಲ್ಲಿ ಎಷ್ಟು ಅಂಕ ಗಳಿಸಬೇಕು.

ಪ್ರಾಥಮಿಕ ಶಾಲಾ ಶಿಕ್ಷಕನಾಗಬೇಕಾದರೆ ಟಿ.ಸಿ.ಹೆಚ್. ಮಾಡಬೇಕು. ಟಿ.ಸಿ.ಹೆಚ್.ಗೆ ಸೇರಲು ಪಿ.ಯು.ಸಿ.ಯಲ್ಲಿ ಕನಿಷ್ಟ ಶೇ.೬೦ಕ್ಕಿಂತ ಹೆಚ್ಚು ಅಂಕಗಳಿಸಬೇಕು.

ಆರ್.ಎಸ್.ಮೇಟಿ, ಬಾದಾಮಿ.

ನಾನು ೪ ವರ್ಷದ ಹಿಂದೆ ದ್ವಿತೀಯ ಪಿ.ಯು.ಸಿ. (ವಿಜ್ಞಾನ) ಓದುತ್ತಿದ್ದೆ. ಅರ್ಧಕ್ಕೆ ನಿಲ್ಲಿಸಿದೆ. ೨೩ ವರ್ಷದ ನನಗೆ ಮತ್ತೆ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಕಟ್ಟಲು ಬರುವುದೇ? ಈಗ ಹೊಸಪೇಟೆ ಎಂ.ಎಸ್.ಪಿ.ಎಲ್. ಫ್ಯಾಕ್ಟರಿಯಲ್ಲಿ ಸುಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ.

ನೀವು ಅಗತ್ಯವಾಗಿ ಪಿ.ಯು.ಸಿ. ಕಟ್ಟಿ ಪಾಸ್ ಮಾಡಿಕೊಳ್ಳಬಹುದು. ಮುಕ್ತ ವಿಶ್ವವಿದ್ಯಾಲಯದಿಂದಲೂ ನೀವು ವಿದ್ಯಾಭ್ಯಾಸ ಮುಂದುವರೆಸಬಹುದು.

ಕೆ.ರಾಮು, ಗಂಗಾವತಿ.

ನಾನು ಬಿ.ಕಾಂ. ಅಂತಿಮ ವರ್ಷದಲ್ಲಿ ಓದುತ್ತಿದ್ದೇನೆ. ಮುಂದೆ ಬಿ.ಎಚ್.ಎಂ. (ಬ್ಯಾಚಲರ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್) ಓದುವ ಆಸೆ. ಡಿಗ್ರಿಯಲ್ಲಿ ಶೇ.೪೬ರಷ್ಟು ಅಂಕಗಳಿವೆ. ಅದಕ್ಕಾಗಿ ಪಿ.ಯು.ಸಿ.ಯ ಮೇಲೆ ಮಾಡಬೇಕೆಂದುಕೊಂಡಿದ್ದೇನೆ. ಇದು ಎಷ್ಟು ವರ್ಷದ ಕೋರ್ಸ್? ಯಾವಾಗ ಅರ್ಜಿ ಕರೆಯುತ್ತಾರೆ. M.C.A. (Master of Computer Applications) ಮಾಡಲು ಎಂಥ ಅರ್ಹತೆಗಳು ಬೇಕಾಗುತ್ತವೆ? ತಿಳಿಸಿ.

ಪಿ.ಯು.ಸಿ. ಮೇಲೆ ನೀವು ಹೋಟೆಲ್ ಮ್ಯಾನೇಜ್‌ಮೆಂಟ್ ಡಿಗ್ರಿ ಮಾಡಬಹುದು. ಇದಕ್ಕೆ ಪಿ.ಯು.ಸಿ.ಯಲ್ಲಿ ಶೇ.೫೦ರಷ್ಟು ಅಂಕ ಪಡೆದಿರಬೇಕು. ಇದಕ್ಕೆ ಲಿಖಿತ ಪರೀಕ್ಷೆ ಮತ್ತು ಪರ್ಸನಲ್ ಇಂಟರ್‌ವ್ಯೂ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ವಿಳಾಸ ಸಂಪರ್ಕಿಸಿ.

Welcome Group Graduate

School of Hotel Administration, Valley View Hotel, Manipal, Karnataka

ಪ್ರಕಾಶ ಗೌಡ್ರ, ತೆಗ್ಗಿ.

ನನಗೆ ವಯಸ್ಸು ೨೦, ೭ನೇ ತರಗತಿ ಓದಿ ಶಾಲೆ ಬಿಟ್ಟು ೭ ವರ್ಷಗಳಾದವು. ಈಗ ನಾನು ಖಾಸಗಿಯಾಗಿ ಎಸ್.ಎಸ್.ಎಲ್.ಸಿ. ಕಟ್ಟಬಹುದೇ? ಸಲಹೆ ನೀಡಿ.

ನೀವು ಖಾಸಗಿಯಾಗಿ ಎಸ್ಸೆಸ್ಸೆಲ್ಸಿ ಕಟ್ಟಿ ಪಾಸ್ ಮಾಡಿಕೊಳ್ಳಬಹುದು. ಇದಕ್ಕಾಗಿ ನಿಮ್ಮ ಹತ್ತಿರದ ಪ್ರೌಢಶಾಲೆಯನ್ನು ಸಂಪರ್ಕಿಸಿ.

ಎಂ.ಎನ್. ಅರುಣಕುಮಾರ್, ಬೆಂಗಳೂರು.

'ಬಿಸಿಲ ಬದುಕು' ಸೆಪ್ಟೆಂಬರ್ ತಿಂಗಳಿನ 'ಕಂಪ್ಯೂಟರ್ ಶಿಕ್ಷಣ' ಕುರಿತ ಉಚಿತ ಪುಸ್ತಕದಲ್ಲಿ ಸ್ಪ್ಯಾನ್ ಕಂಪ್ಯೂಟರ್ ಸಂಸ್ಥೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಕಲಿಕೆಯೊಂದಿಗೆ ಗಳಿಕೆ' (Earn While learn) ಸೌಲಭ್ಯ ಸಿಗುತ್ತದೆ ಎಂದು ಹೇಳಿದ್ದೀರಿ. ಈ ಸಂಸ್ಥೆಯ ಜಯನಗರವಿಭಾಗ ವಿಳಾಸ ಹಾಗೂ ಫೋನ್ ನಂ. ತಿಳಿಸಿ. ಇದೇ ರೀತಿಯ ಬೇರೆ ಕಂಪ್ಯೂಟರ್ ಸಂಸ್ಥೆಗಳಿದ್ದರೆ ಅವುಗಳ ವಿಳಾಸ ಕೊಡಿ.

ಜಯನಗರದ Span Computer Centreನ ವಿಳಾಸ:
Span Computer Education,
4th Block, Jayanagar,
Bangalore

ಕೆ. ಶಿವಕುಮಾರ, ಹೊಸಳ್ಳಿ.

ಸರ್, ನಾನು ಪಿ.ಯು.ಸಿ. ದ್ವಿತೀಯ ವರ್ಷದಲ್ಲಿ ಓದುತ್ತಿರುವುದು. ಮುಂದೆ 'ಜರ್ನಲಿಸ್ಟ್' ಆಗುವ ಆಸೆ ಸಾಧ್ಯನಾ? ಪಿ.ಯು.ಸಿ. ನಂತರ ಯಾವ್ಯಾವ ಪದವಿಗಳಿವೆ? ಯಾವ ಪದವಿ ಭವಿಷ್ಯಕ್ಕೆ ಒಳ್ಳೆಯದು. ಮಾಹಿತಿ ನೀಡಿ.

ನೀವು ಅಗತ್ಯವಾಗಿ ನಿಮ್ಮ ಆಸೆಯಂತೆ ಜರ್ನಲಿಸ್ಟ್ ಆಗಬಹುದು. ಇದಕ್ಕೆ ಡಿಪ್ಲೊಮಾ ಇನ್ ಜರ್ನಲಿಸಂ ಮಾಡಬೇಕು. ಇದು ಕರ್ನಾಟಕದ ಎಲ್ಲಾ ಯೂನಿವರ್ಸಿಟಿಗಳಲ್ಲೂ ಲಭ್ಯ. ಜರ್ನಲಿಸಂನಲ್ಲಿ ಪದವಿ ಸಹ ಮಾಡಬಹುದು.

ಎನ್.ನರೇಂದ್ರ, ಹೊಳೇನರಸೀಪುರ.

J.O.C. (Job Oriental Course) ವಿದ್ಯುತ್ ವಿಭಾಗದಲ್ಲಿ ಓದುತ್ತಿರುವ ನನಗೆ ಅಪ್ರೆಂಟಿಶಿಪ್‌ಗೆ ಹೋಗಲು ಅವಕಾಶ ವಿರುವುದೇ? ಇದ್ದರೆ ಅಪ್ರಂಟಿಶಿಪ್ ಕೇಂದ್ರಗಳ ವಿಳಾಸ ತಿಳಿಸಿ.

ನೀವು ಜೆ.ಓ.ಸಿ. ಮಾಡಿದ ನಂತರ ಅಪ್ರಂಟಿಶಿಪ್ ಮಾಡಬಹುದು. ಅಪ್ರಂಟಿಶಿಪ್ ಮಾಡಲು ನೀವು ಡೈರಕ್ಟರೇಟ್ ಆಫ್ ಟೆಕ್‌ನಿಕಲ್ ಎಜುಕೇಷನ್ ಬೋರ್ಡ್, ಕೆ.ಆರ್. ಸರ್ಕಲ್, ಬೆಂಗಳೂರು ಇಲ್ಲಿ ರಿಜಿಸ್ಟರ್ ಮಾಡಿಸಬೇಕು. ನೀವೇ ದೊಡ್ಡ ಕಂಪನಿಗಳಿಗೆ ಅರ್ಜಿ ಹಾಕಿ ಪ್ರಯತ್ನಿಸಬಹುದು.

ರಾಜಾಸಾಬ, ಕಾರಟಗಿ.

೧೦ನೇ ತರಗತಿಯಲ್ಲಿ ಶೇ.೪೭ರಷ್ಟು ಅಂಕಗಳೊಂದಿಗೆ ಪಾಸಾಗಿದ್ದೇನೆ. ನನಗೆ ಹಿಂದಿ ವಿಷಯದಲ್ಲಿ ತುಂಬಾ ಆಸಕ್ತಿ. ಮುಂದೆ ಏನು ಮಾಡಿದರೆ ನೌಕರಿ ಸಿಗುತ್ತದೆ. ತಿಳಿಸಿ.

ಹಿಂದಿಯಲ್ಲಿ ಆಸಕ್ತಿ ಇದ್ದಲ್ಲಿ, ಹಿಂದಿ ಪರೀಕ್ಷೆಗಳನ್ನು ಪಾಸ್ ಮಾಡಿದಲ್ಲಿ ಹಿಂದಿ ಶಿಕ್ಷಕರಾಗಿ ಉದ್ಯೋಗ ದೊರೆಯುವ ಸಾಧ್ಯತೆ ಇರುತ್ತದೆ. ನೀವು ನೌಕರಿ ಎಂದರೆ ಸರ್ಕಾರಿ ಕೆಲಸವೇ ಬೇಕೆಂಬ ನಿಮ್ಮ ಮನಸ್ಸಿನ ಆಸೆಯನ್ನು ಕಿತ್ತೊಗೆಯಬೇಕು. ಕಷ್ಟಪಟ್ಟಲ್ಲಿ ದುಡಿಯಲು ಅವಕಾಶ ಸಿಗುತ್ತದೆ.

ಕಪರ್ದಿ, ಬೆಂಗಳೂರು.

ನಾನು ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ (ಕನ್ನಡ) ತೃತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ವಯಸ್ಸು ೨೦ ವರ್ಷ. ಇದು ಹುಡುಗಿಯರಿಗೆ ಒಳ್ಳೆಯ ಉದ್ಯೋಗಾವಕಾಶವಿರುವ ಕೋರ್ಸ್ ಎನ್ನುತ್ತಾರೆ. ಇದು ನಿಜವೇ? ಒಂದು ವೇಳೆ ನಮಗೆ ಕೆಲಸ ಸಿಕ್ಕರೆ ವೇತನ ಎಷ್ಟಾಗಬಹುದು? ನಮ್ಮ ಉತ್ತಮ ಭವಿಷ್ಯಕ್ಕಾಗಿ ಇದರ ನಂತರ ಯಾವ ಬಗೆಯ ಶಿಕ್ಷಣ ಪಡೆಯುವುದು ಸೂಕ್ತ. ನಾನು ಯಾವುದಾದರು ಬ್ಯಾಂಕಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಸಾಧ್ಯವೆ? ದಯಮಾಡಿ ತಿಳಿಸಿ.

ನೀವು ಕಮರ್ಷಿಯಲ್ ಪ್ರಾಕ್ಟೀಸ್‌ನ ಜೊತೆ ಕಂಪ್ಯೂಟರ್ ಕೋರ್ಸ್‌ಗಳನ್ನು ಕಲಿತರೆ ಉದ್ಯೋಗ ಅವಕಾಶಗಳು ಹೆಚ್ಚು. ನಿಮಗೆ ಕೆಲಸ ಸಿಕ್ಕರೆ ೨೦೦೦-೩೫೦೦ವರೆಗೂ ವೇತನ ಸಿಗಬಹುದು. ಎಸ್ಸೆಸ್ಸೆಲ್ಸಿ ಆಧಾರದ ಮೇಲೆ ಬ್ಯಾಂಕಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬಹುದು.

ಜಯಂತ್ ಎಸ್., ಬೆಂಗಳೂರು.

ನಾನು ಬಿ.ಕಾಂ. ದ್ವಿತೀಯ ವರ್ಷದ ವಿದ್ಯಾರ್ಥಿ. ಜೊತೆಯಲ್ಲಿ ಐ.ಸಿ.ಡಬ್ಲ್ಯೂ.ಎ.ಐ. (I.C.W.A.I.) ಪರೀಕ್ಷೆ ತೆಗೆದುಕೊಂಡಿದ್ದೇನೆ. ಮುಂದೆ ಎಂ.ಕಾಂ. ಮಾಡಲೂ ಅಥವಾ ಐ.ಸಿ.



ರಾಜಕಾರಣಿಗಳು ಕೊಡ್ತಾಯಿರೊ ಹೇಳಿಕೆಗಳನ್ನ ನೋಡಿದ್ರೆ, ಮುಂದೆ ನಮ್ಗೆ ಕಾಂಪಿಟೇಶನ್ ಕೊಡ್ತಾರಂತೆ ಅನುಸ್ತೆ ಗುರುವೆ...

ಡಬ್ಲ್ಯೂ. ಎ.ಐ. ಮುಂದುವರಿಸಲೊ? ಯಾವುದರಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳಿವೆ.

ನೀವು ಐ.ಸಿ.ಡಬ್ಲ್ಯೂ.ಎ.ಐ.ಯನ್ನು ಮುಂದುವರೆಸಿ. ಇದರಿಂದ ಹೆಚ್ಚಿನ ಉದ್ಯೋಗ ಅವಕಾಶಗಳು ಲಭಿಸುತ್ತವೆ ಮತ್ತು ಅತ್ಯುತ್ತಮವಾದ ವೇತನವೂ ದೊರೆಯುತ್ತದೆ.

ಭರತ್ ಎಸ್., ಬೆಂಗಳೂರು.

ಮೊದಲ ವರ್ಷದ ಪಿ.ಯು.ಸಿ. (ಕಲಾ) ವಿದ್ಯಾರ್ಥಿ. ನನಗೆ National School of Law ಇಲ್ಲಿ ಓದಬೇಕೆಂದು ಆಸೆ. ಅಲ್ಲಿ ಪ್ರವೇಶ ಪಡೆಯಲು ಯಾವ ಕ್ರಮ ಇದೆ? C.E.T. ಪರೀಕ್ಷೆ ಇರುವುದೇ? ಇರುವುದಾದರೆ ಆ ಪರೀಕ್ಷೆಗೆ ಎಂಥ ಪುಸ್ತಕಗಳನ್ನು ಓದಬೇಕು. ಮಾಹಿತಿಗಾಗಿ ಕೋರುತ್ತೇನೆ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿನಲ್ಲಿ ಓದಲು ಅಲ್ಲಿಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಇದು ಸಿ.ಇ.ಟಿ. ತರವೇ ಇರುತ್ತದೆ. ಇದರಲ್ಲಿ Numerical Aptitude, English Usage and comphehention, general awareness and leagal aptitude ಇರುತ್ತದೆ.

ಶ್ರೀನಿವಾಸ, ಬೈರಸಂದ್ರ.

ಸರ್, ನನಗೆ ಪಿ.ಯು.ಸಿ.ಯಲ್ಲಿ ಪ್ರತಿಶತ ೬೮ರಷ್ಟು ಅಂಕಗಳು ಬಂದಿವೆ. ಕಾರಣಾಂತರಗಳಿಂದ ಕಳೆದ ವರ್ಷ ಓದು ನಿಲ್ಲಿಸಿ ಈ ವರ್ಷ ಮುಂದುವರಿಸುತ್ತಿದ್ದೇನೆ. ಬಿ.ಇ., ಬಿ.ಎಸ್ಸಿ., ಡಿಪ್ಲೊಮಾ ಇವುಗಳಲ್ಲಿ ಯಾವುದು ಉತ್ತಮ. ಬಿ.ಇ.ಗೆ ಪ್ರವೇಶ ಪರೀಕ್ಷೆ ಬರೆಯಲೇಬೇಕೆ?

ನೀವು ಪಿ.ಯು.ಸಿ.ಯಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದೀರಿ. ನೀವು ಬಿ.ಇ.ಗೆ ಸೇರಲು ಪ್ರವೇಶ ಪರೀಕ್ಷೆಯನ್ನು ಬರೆಯಲೇಬೇಕು. ಬಿ.ಇ., ಬಿ.ಎಸ್ಸಿ., ಡಿಪ್ಲೊಮಾ ಕೋರ್ಸ್‌ಗಳು ತಮ್ಮದೇ ಆದಂತಹ ಸ್ಕೋಪ್ ಹೊಂದಿವೆ. ಬೇಗ ಕೆಲಸ ಬೇಕೆಂದರೆ ಡಿಪ್ಲೊಮಾ ಒಳ್ಳೆಯದು. ನಿಧಾನವಾದರು ಉತ್ತಮವಾದ ಕೆಲಸಬೇಕೆಂದರೆ ಬಿ.ಇ. ಒಳ್ಳೆಯದು. ನಿಧಾನವಾಗಿ ಯಾವುದಾದರೂ ಕೆಲಸವಾದರೂ ಸರಿ ಎಂದರೆ ಬಿ.ಎಸ್ಸಿ. ಮಾಡಬಹುದು. ಆದೇ ರೀತಿ ಈ ಕೋರ್ಸ್‌ಗೆ ತಕ್ಕಂತೆ ಖರ್ಚು ಇರುತ್ತದೆ.

ಗುರುಪಾಂಡೆ, ಕಲಘಟಗಿ.

ಬಿ.ಎಸ್ಸಿ.(ಸಿ.ಬಿ.ಝಡ್.) ಓದುತ್ತಿರುವೆ. ಮುಂದೆ ಎಂ.ಸಿ.ಎ. ಅಥವಾ Msc in Computer Software ಮಾಡಲು ಪ್ರವೇಶ ಪರೀಕ್ಷೆಗಳಿವೆಯಾ? ಈ ಕೋರ್ಸ್‌ಗಳನ್ನು ಓದುವುದರಿಂದ ಉದ್ಯೋಗವಕಾಶಗಳು ಸಿಗುವವೇ?

ಕಂಪ್ಯೂಟರ್ ಸಾಫ್ಟ್‌ವೇರ್ ಕೋರ್ಸ್‌ಗಳು ಕಂಪ್ಯೂಟರ್ ಸೆಂಟರ್‌ಗಳಲ್ಲಿ ದೊರೆಯುತ್ತವೆ. ಆಪ್‌ಟೆಕ್ ಅಥವಾ ಸ್ಟ್ಯಾನ್ ಕಂಪ್ಯೂಟರ್ ಸೆಂಟರ್‌ಗಳಲ್ಲಿ ವಿಚಾರಿಸಿ. ಬಿ.ಎಸ್ಸಿ.ನಂತರ ಎಂ.ಸಿ.ಎ.ಯನ್ನು ಮಾಡಬಹುದು. ಇದಕ್ಕೆ ಪ್ರವೇಶ ಪರೀಕ್ಷೆ ಇರುತ್ತದೆ. ಉದ್ಯೋಗ ಅವಕಾಶಗಳು ಇರುತ್ತವೆ.

ಗುರುಚರಣ್, ಹುಬ್ಬಳ್ಳಿ

ಓದುತ್ತಿರುವುದು ಪಿ.ಯು.ಸಿ. (ಪಿ.ಸಿ.ಎಂ.ಬಿ.) ದ್ವಿತೀಯ ವರ್ಷದಲ್ಲಿ ನಂತರ ಬಿ.ಎಸ್ಸಿ. ನರ್ಸಿಂಗ್ ಮಾಡಿ, ಎಂ.ಸಿ.ಎ. ಅಥವಾ

MSc in Software Course, I.A.S. ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡಬೇಕೆಂದಿರುವೆ. ಯಾವುದನ್ನು ಆರಿಸಿಕೊಳ್ಳಲಿ.

ನೀವು ಪಿ.ಯು.ಸಿ.ಯ ನಂತರ ಬಿ.ಎಸ್ಸಿ. ನರ್ಸಿಂಗ್ ಮಾಡಬಹುದು. ಇದರಿಂದ ಒಳ್ಳೆಯ ಉದ್ಯೋಗ ದೊರೆಯುತ್ತದೆ. ಈ ಪದವಿಯ ನಂತರ ಐ.ಎ.ಎಸ್. ಸಹ ಮಾಡಬಹುದು. ಕಂಪ್ಯೂಟರ್ ಸಾಫ್ಟ್‌ವೇರ್‌ನ್ನು ಸಹ ಕಲಿಯಬಹುದು.


ಜಿ.ಎಂ. ಶಹನಾಜ ಬಾನು, ನವಲಗುಂದ.

ನನಗೀಗ ೨೯ ವರ್ಷ. ಬಿ.ಎ.ಶೇ.೫೦, ಬಿ.ಎಡ್. ಶೇ.೭೦, ಎಂ.ಎ. ರಾಜ್ಯಶಾಸ್ತ್ರ ಬಾಹ್ಯ ಶೇ.೫೦. ಹೀಗೆ ಶೈಕ್ಷಣಿಕ ದಾಖಲೆ ಇದೆ. ನನಗೆ ಟಿ.ವಿ.ಯಲ್ಲಿ 'ಕನ್ನಡ ವಾರ್ತೆ ಓದುವ' ಹುದ್ದೆಗೆ ಸೇರುವ ಆಸೆ. ಬಿ.ಎ.ಯಲ್ಲಿ ಕನ್ನಡ ನನ್ನ ಐಚ್ಛಿಕ ವಿಷಯಗಳಲ್ಲೊಂದು. ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಆಗಬೇಕಾದರೆ ಏನು ಮಾಡಬೇಕು? ಅಲ್ಲದೆ Telephone operator courseನ್ನು ಮುಗಿಸಿರುವೆ. ಆದರೆ Operator Board operate ಮಾಡಲು ಬರುವುದಿಲ್ಲ. ಹೀಗಿದ್ದೂ ಯಾವುದಾದರೂ ಕೆಲಸ ಸಿಗಲು ಸಾಧ್ಯವೆ? ದಯಮಾಡಿ ತಿಳಿಸಿ.

ನೀವು ಉತ್ತಮವಾದ ಶೈಕ್ಷಣಿಕ ಹಿನ್ನೆಲೆ ಹೊಂದಿದ್ದೀರಿ. ತಾವು ಹೈಸ್ಕೂಲ್ ಉಪಾಧ್ಯಾಯರಾಗಲು, ಕಾಲೇಜ್‌ನಲ್ಲಿ ಉಪನ್ಯಾಸಕರಾಗಲು ಅರ್ಹರಾಗಿದ್ದೀರಿ. ಸರ್ಕಾರಿ ಕೆಲಸಕ್ಕೆ ಕಾಯದೇ ಯಾವುದಾದರೂ ಖಾಸಗಿ ಶಾಲಾ/ಕಾಲೇಜ್‌ಗಳಲ್ಲಿ ಸೇವೆಯನ್ನು ಪ್ರಾರಂಭಿಸಿ. ''ಕನ್ನಡ ವಾರ್ತೆ'' ಓದುವ ಹುದ್ದೆಗೆ ಸೇರಲು ತಾವು ದೂರದರ್ಶನದವರು ಕರೆಯುವ ನ್ಯೂಸ್ ರೀಡರ್ಸ್ ಹುದ್ದೆಗೆ ಅರ್ಜಿ ಸಲ್ಲಿಸಿ ಪ್ರಯತ್ನಿಸಿ. ಪೋಲೀಸ್ ಇನ್ಸ್‌ಪೆಕ್ಟರ್ ಆಗಲು ಎತ್ತರ ೧೬೭ ಸೆಂ.ಮೀ. ಮತ್ತು ತೂಕ ೫೦ ಕೆ.ಜಿ. ಇರಬೇಕು. ರಿಟನ್ ಮತ್ತು ಪರ್ಸನಾಲಿಟಿ ಟೆಸ್ಟ್‌ನಲ್ಲಿ ತೇರ್ಗಡೆಯಾಗಬೇಕು. ನಿಮಗೆ ಯಾವುದಾದರೂ ಕೆಲಸ ಸಿಗಲೆಂದು ಹಾರೈಸುತ್ತೇವೆ.

ನಾರಾಯಣ ಜಿ.ಗೌಡ, ಕರ್ಕಿಸವಲ.

೧೯೯೬-೯೭ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.೭೦.೪ ರಷ್ಟು ಅಂಕಗಳಿಸಿರುವೆ. ಮೆಕ್ಯಾನಿಕಲ್ ಡಿಪ್ಲೊಮಾ ಮಾಡಿ



ಅರ್ಧಕ್ಕೆ ನಿಲ್ಲಿಸಿದೆ. ಮುಂದೆ ೧೯೯೮ ಜುಲೈಯಿಂದ ಬೇರೆ ಯಾವುದಾದರೂ ಕೋರ್ಸ್ ಮಾಡುತ್ತಾ ವಾಣಿಜ್ಯ ಪಿ.ಯು.ಸಿ. (ದ್ವಿತೀಯ) ಕರಸ್ಪಾಂಡೆನ್ಸ್ ಮಾಡಲು ಸಾಧ್ಯವೆ? ಬೇರೆ ಕೋರ್ಸ್ ಮಾಡುವುದಾದರೆ ಕಲಾ ವಿಭಾಗ ಅಥವಾ ವಿಜ್ಞಾನ ವಿಭಾಗ ಯಾವುದನ್ನು ಆರಿಸಿಕೊಳ್ಳಲಿ? ಜುಲೈ ಬರುವವರೆಗೆ ಅಲ್ಪಾವಧಿ ಕೋರ್ಸ್ ಏನಾದರೂ ಇದೆಯಾ? ದಯಮಾಡಿ ತಿಳಿಸಿ.

ಪಿ.ಯು.ಸಿ. (ವಾಣಿಜ್ಯ)ಯನ್ನು ಕರಸ್ಪಾಂಡೆನ್ಸ್‌ನಲ್ಲಿ ಮಾಡಲು ಸಾಧ್ಯವಿದೆ. ಅಲ್ಪಾವಧಿ ಕೋರ್ಸುಗಳು ಬೇಕಾದಷ್ಟಿವೆ. ಇವುಗಳನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಕೊಡುತ್ತವೆ. ಇದರ ಬಗ್ಗೆ ದಿನಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಗಮನಿಸಿ.

ನಾಗರಾಜ ನಾಯಕ, ಸಿಂಧನೂರು.

ಸರ್, ನಾನು ಪಿ.ಯು.ಸಿ. (ವಿಜ್ಞಾನ) ಸಾಧಾರಣವಾಗಿ ಪಾಸಾಗಿರುವೆ. ಮುಂದೆ ಬಿ.ಎ.ಎಂ.ಎಸ್. ಮಾಡಬೇಕೆಂದಿರುವೆ. ಪಾವತಿ ಸೀಟಾದರೂ ಪ್ರವೇಶ ಪಡೆಯುತ್ತೇನೆ. ಆದರೆ ಕೆಲವರು ನನ್ನದು ಪಿ.ಯು.ಸಿ. ಫಲಿತಾಂಶ ಸಾಧಾರಣವಾಗಿರುವುದರಿಂದ ಬಿ.ಎ.ಎಂ.ಎಸ್. ಮುಗಿದ ನಂತರ ಅದರ ಪ್ರಮಾಣಪತ್ರ ಬಂದರೆ ಬರಬಹುದು ಇಲ್ಲದಿದ್ದರೆ ಇಲ್ಲ ಎನ್ನುತ್ತಾರೆ. ಇದು ನಿಜವೇ? ಮತ್ತು ನಾನು ರೇಡಿಯೊ ಮತ್ತು ಟಿ.ವಿ. ಕೋರ್ಸ್ ಮುಗಿಸಿರುವೆ. ಯಾವುದಾದರು Electronics ಸಂಬಂಧಿಸಿದ ಫ್ಯಾಕ್ಟರಿಯಲ್ಲಿ ಸೇರಿಕೊಳ್ಳಬಹುದೇ? ತಿಳಿಸಿ.

ಯಾವುದಾದರೂ ಬಿ.ಎ.ಎಂ.ಎಸ್. ಕಾಲೇಜಿನ ಪ್ರಿನ್ಸಿಪಾಲರನ್ನು ಭೇಟಿಯಾಗಿ. ವಿವರವಾಗಿ ಚರ್ಚಿಸಿ ನಿಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳಿ. ದುಡಿಯುವ ಆಸಕ್ತಿ ಹೊಂದಿದ್ದರೆ ಫ್ಯಾಕ್ಟರಿಗೆ ಸೇರುವುದು ಒಳ್ಳೆಯದು.

ಶಂಬು ಜಿ, ಹಳ್ಳಿಕೇರಿ.

ನಾನು ಪಿ.ಯು.ಸಿ. ಕಲಾ ದ್ವಿತೀಯ ವರ್ಷದಲ್ಲಿದ್ದು ಮುಂದೆ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗುತ್ತೇನೆ ಮತ್ತು ನಂತರ B.A. ಮಾಡಿ, ಅದರಲ್ಲಿ ಉತ್ತೀರ್ಣನಾಗಿ ಮುಂದೆ Law ಮಾಡಬೇಕೆಂದಿರುವೆ. ಅದಕ್ಕಾಗಿ Law ಕ್ಕೆ ಬೇಕಾಗುವ ಅರ್ಹತೆಗಳನ್ನು (ನಿಯಮಗಳನ್ನು) ನೀವು ತಪ್ಪದೆ ನಿಮ್ಮ ಮುಂದಿನ ಮಾಸಪತ್ರಿಕೆಯಲ್ಲಿ ವಿದ್ಯಾ ಉದ್ಯೋಗ ವಿಭಾಗದಲ್ಲಿ ಪ್ರಕಟಿಸುತ್ತೀರೆಂದು ನಂಬಿರುವೆ.

ನೀವು ಎರಡನೆ ಪಿ.ಯು.ಸಿ ನಂತರ ನೇರವಾಗಿ ಐದು ವರ್ಷದ ಎಲ್.ಎಲ್.ಬಿ. ಯನ್ನು ಮಾಡಬಹುದು. ಇದಲ್ಲದೆ ಬಿ.ಎ. ಮುಗಿದ ನಂತರ ಎರಡು ವರ್ಷದ ಎಲ್.ಎಲ್.ಬಿಯನ್ನು ಮಾಡಬಹುದು.

ವಾಣಿಶ್ರೀ, ಗಂಗಾವತಿ.

ನನ್ನ ಹೆಸರು ವಾಣಿಶ್ರೀ. ನನ್ನ ವಯಸ್ಸು ೧೭ ವರ್ಷ. ನಾನು ೧೯೯೬ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರತಿ ಶತ ೫೨%ರಷ್ಟು ಅಂಕ ಗಳಿಸಿ ತೇರ್ಗಡೆಯಾಗಿದ್ದೇನೆ. ನನ್ನ ಕೌಟುಂಬಿಕ ಸ್ಥಿತಿಯಿಂದ ೧ ವರ್ಷ ಮನೆಯಲ್ಲಿ ಉಳಿಯಬೇಕಾಯಿತು. ಈಗ ನಾನು ಸೈನ್ಸ್ ಮಾಡಬೇಕೆಂದಿರುವೆ. ೧ ವರ್ಷ ಹಾಳಾಗಿರುವುದರಿಂದ ಡಿಪ್ಲೊಮೋ ಕೋರ್ಸ್ ಮಾಡಬೇಕೆಂದಿರುವೆ. ನಂತರ ಸೈನ್ಸ್ ಪರೀಕ್ಷೆಯನ್ನು ನೇರವಾಗಿ ಕಟ್ಟಬಹುದೇ ಅದು ಯಾವಾಗ ಮತ್ತು ಎಷ್ಟನೇ ವರ್ಷದಲ್ಲಿ ಮಾಡಬಹುದು. ಆದರ ಸೌಲಭ್ಯಗಳು ಎಲ್ಲಿ ದೊರೆಯುತ್ತವೆ. ತಿಳಿಸಿ.

ನೀವು Diploma course ನಂತರ ಪಿ.ಯು.ಸಿ. ಮಾಡಬಹುದು. ನೀವು ಪಿ.ಯು.ಸಿ. ಮಾಡಬೇಕಾದಲ್ಲಿ ಹತ್ತಿರದ ಕಾಲೇಜನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ಸುನಿತ, ರಾಣೆಬೆನ್ನೂರು.

ನಾನು ಈಗ ದ್ವಿತೀಯ B.A ಮುಗಿಸಿ ತೃತೀಯ B.Aಗೆ ಹೋಗುತ್ತಾ ಇದ್ದೇನೆ. ನನಗೆ K.A.S. ಮಾಡಬೇಕೆಂಬ ಆಸೆ ಇದೆ. ಅದಕ್ಕೆ K.A.S. ಮಾಡಲು ನಾವು ವಿಷಯಗಳನ್ನು ತೆಗೆದುಕೊಳ್ಳಬೇಕು. ಅದರಲ್ಲಿ ಎಷ್ಟು ವಿಷಯಗಳಿವೆ. K.A.S. ಮಾಡಲು ಪದವಿಪೂರ್ತಿ ಮುಗಿಸಿರಬೇಕೆ ಅಥವಾ ಪದವಿಯ ಕೊನೆಯ ವರ್ಷದಲ್ಲಿದ್ದುಕೊಂಡು K.A.S.ಗೆ ಅರ್ಜಿಯನ್ನು ಹಾಕಬಹುದೇ ಹಾಗೂ ಇದರ ಪರೀಕ್ಷೆಗಳನ್ನು ಎಲ್ಲಿ ನಡೆಸುತ್ತಾರೆ ಎಂಬುದನ್ನು ವಿವರವಾಗಿ ತಿಳಿಸುತ್ತೀರೆಂದು ನಂಬಿರುತ್ತೇನೆ.

KAS ಮಾಡಲು ಕನಿಷ್ಠ ಪದವಿ ಮುಗಿಸಿರಬೇಕು. ನೀವು ಪದವಿಯ ಕೊನೆಯ ವರ್ಷದಲ್ಲಿ ಓದುತ್ತಿದ್ದಾಗ KAS ಗೆ ಅರ್ಹರಾಗುವುದಿಲ್ಲ. ಇದನ್ನು KPSC ನವರು ನಡೆಸುತ್ತಾರೆ. ನೀವು ಯಾವುದೇ ವಿಷಯವನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು. ಆದರೆ ನೀವು ಪದವಿಯಲ್ಲಿ ಓದಿದ ವಿಷಯ ಆಯ್ಕೆ ಮಾಡಿಕೊಂಡರೆ ನಿಮಗೆ ಪರೀಕ್ಷೆಗೆ ತಯಾರಿಯಾಗಲು ಅನುಕೂಲವಾಗುತ್ತದೆ.

ರಂಜಿತ್‌ಕುಮಾರ್, ಹಾಸನ.

ಸರ್, ನಾನು ಪ್ರಥಮ ಬಿ.ಎ. (ಇ.ಇ.ಡಿ) ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದೇನೆ. ನನಗೆ ಅರಣ್ಯ ಸೇವೆಯಲ್ಲಿ ಸೇವೆ ಸಲ್ಲಿಸುವ ಹೆಬ್ಬಯಕೆ. ಆದರೆ ಅವರ (IFS) ಸೂಕ್ತ ಮಾರ್ಗದರ್ಶನ ಇಂದು ನಿಮ್ಮಿಂದ ಪಡೆಯುವ ಭಾಗ್ಯ ನನಗೆ ಒದಗಿದೆ. ಆದ್ದರಿಂದ,

೧. ಈ ಅರಣ್ಯ ಸೇವೆಗೆ (IFS) ಸೇರಲು ಯಾವ ವಿದ್ಯಾರ್ಹತೆ ಬೇಕು. ಅಂದರೆ ನಾನು ಓದುತ್ತಿರುವ ಬಿ.ಎ.ವಿದ್ಯಾರ್ಹತೆ ಆಗುತ್ತದೆಯೇ?

೨. ಈ ಸೇವೆಗೆ ಸ್ಪರ್ಧಾ ಪರೀಕ್ಷೆಯು ಯಾವ ತಿಂಗಳಲ್ಲಿ ನಡೆಯುತ್ತದೆ?

೩. ಈ ಸೇವೆಗೆ ಸ್ಪರ್ಧಿಸುವ ಪರೀಕ್ಷೆಗೆ ಅರ್ಜಿ ಎಲ್ಲಿಂದ ಪಡೆಯಬೇಕು?

೪. ಈ ಸೇವೆಗೆ ಐಚ್ಛಿಕ ಹಾಗು ಇತರ ವಿಷಯಗಳಾವುವು? ಎಂಬುದನ್ನು ದಯವಿಟ್ಟು ತಿಳಿಸಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

IFSಗೆ ಸೇರಲು ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದ ಪದವಿ ಸಾಕು. ನೀವು ಬಿ.ಎ. ಮುಗಿಸಿ IFS ಮಾಡಬಹುದು.

೨. ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಪ್ರಮುಖ ದಿನ ಪತ್ರಿಕೆಗಳಲ್ಲಿ ಅರ್ಜಿಗಳನ್ನು ಕರೆಯುತ್ತಾರೆ.

೩. ಈ ಸೇವೆಗೆ ಸ್ಪರ್ಧಿಸುವ ಪರೀಕ್ಷೆಯ ಅರ್ಜಿ ಕೇಂದ್ರ ಲೋಕಸೇವಾ ಆಯೋಗ (UPSC) ನ್ಯೂಡೆಲ್ಲಿ ಇವರು ದಿನಪತ್ರಿಕೆಯಲ್ಲಿ ಪ್ರಕಟಿಸುವ ಅರ್ಜಿ ನಮೂನೆಯಲ್ಲಿ UPSC ಕಾರ್ಯಾಲಯಕ್ಕೆ ಸಲ್ಲಿಸಬೇಕು.

೪. ಈ ಸೇವೆಗೆ ಐಚ್ಛಿಕ ವಿಷಯ ಮತ್ತು ಜನರಲ್‌ನಾಲೆಡ್ಜ್ ಇರುತ್ತದೆ.

ಯೋಗೀಶ್, ಮಲ್ಲೇಶ್ವರಂ.

ನನಗೆ ೨೩ ವರ್ಷ. ಜುಲೈಗೆ ೨೪ ವರ್ಷವಾಗುತ್ತದೆ. ನಾನು ಪಿ.ಯು.ಸಿ. ಯಲ್ಲಿ JOC in Banking ತೆಗೆದುಕೊಂಡು (ಮೈಸೂರು ವಿಶ್ವವಿದ್ಯಾಲಯ) ೫೦% ಪಾಸಾಗಿರುತ್ತೇನೆ ಮತ್ತು ಮೊದಲ ಬಿ.ಕಾಂ. ನ್ನು ಓದಿ ನಿಲ್ಲಿಸಿದೆ. ನಾನು ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಎಂ.ಎ. ಮಾಡಬಹುದೇ ಇದರಿಂದ ಕೆಲಸ ಸಿಗುವ ಸಾಧ್ಯತೆ ಇದೆಯೇ ತಿಳಿಸಿ ಮತ್ತು ಯಾರನ್ನು ಸಂಪರ್ಕಿಸಬೇಕು. ಅರ್ಜಿಗಳನ್ನು ಯಾವಾಗ ಕೊಡುತ್ತಾರೆ?

ನೀವು JOC in Banking ಮಾಡಿರುವುದರಿಂದ ಬ್ಯಾಂಕ್‌ನಲ್ಲಿ ಕೆಲಸಕ್ಕಾಗಿ ಪ್ರಯತ್ನಿಸುವುದು ಒಳ್ಳೆಯದು. ನಿಮಗೆ M.A. ಮಾಡಬೇಕೆಂಬ ಇಚ್ಛೆ ಇದ್ದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದಲೇ ಖಾಸಗಿಯಾಗಿ ಮಾಡಬಹುದು. ಆದರೆ ಇದರಿಂದಲೇ ಕೆಲಸ ಸಿಗುತ್ತದೆ ಎಂಬ ಯೋಚನೆ ಬೇಡ.

ರಂಗಸ್ವಾಮಿ, ಧಾರವಾಡ.

ಸರ್, ನನ್ನ ಸಮಸ್ಯೆಯೇನೆಂದರೆ ನಾನು ದ್ವಿತೀಯ ಪಿ.ಯು.ಸಿ ನಾನು SC.ನಲ್ಲಿ ಬರುತ್ತೇನೆ. ನಾನು ಕನ್ನಡದಲ್ಲಿ IAS ಅಥವಾ IPS ಮಾಡಬೇಕೆಂದಿದ್ದೇನೆ. ನನಗೆ ೨೧ ವರ್ಷ ವಯಸ್ಸು. ಮುಂದೆ ಬಿ.ಕಾಂ. ಓದುತ್ತೇನೆ. ಏನೆಂದರೆ SSLC ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದೇನೆ. ನನಗೆ ಆಗುತ್ತದೋ ಇಲ್ಲವೋ ಎನ್ನುವ ಭಯ ಆತಂಕ ತರಿಸಿದೆ.

೧.ಐ.ಎ. ಎಸ್. ಓದಲು ವಯಸ್ಸಿನ ಮಿತಿಯೇ?

೨.ಬಿ.ಕಾಂ. ನಂತರದ ವೃತ್ತಿಯ ಅವಕಾಶ ಹೇಳಿರಿ.

೩.ಕನ್ನಡದಲ್ಲಿ IAS & IPS ಮಾಡಬಹುದೆ? ಇದಕ್ಕೆ ತಕ್ಕ ಉದಾಹರಣೆಯೆಂದರೆ : ಕೆ.ಶಿವರಾಂ

ನೀವು SSLCಯಲ್ಲಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿರುವುದರಿಂದ ನೀವು B.Com ಮಾಡಲು ತೊಂದರೆ ಇಲ್ಲ. ಆದರೆ ನೀವು ಶ್ರದ್ಧೆ ಶ್ರಮದಿಂದ ಓದಿದಲ್ಲಿ ನಿಮಗೆ ಯಶಸ್ಸು ಲಭಿಸುತ್ತದೆ.

೧. IAS ಓದಲು ಕನಿಷ್ಠ ೨೧ ವರ್ಷ ಆಗಿರಬೇಕು ಮತ್ತು ಪದವೀಧರರಾಗಿರಬೇಕು.

೨. ನೀವು SC/ST ನಲ್ಲಿ ಬರುವುದರಿಂದ ಗರಿಷ್ಟ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ.

೩. B.Com ನಂತರ C.A. ಮುಂತಾದ ವಿವಿಧ ಕೋರ್ಸ್‌ಗಳನ್ನು ಮಾಡಿದ್ದಲ್ಲಿ ಉದ್ಯೋಗವಕಾಶಗಳು ವಿಪುಲವಾಗಿರುತ್ತದೆ.

ಎಚ್.ಆರ್. ಜಿ. ಚಂದ್ರ, ಸಿದ್ಧಾಪುರ.

ನಾನು ಈಗ SSLC ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದು ನನ್ನ ವಯಸ್ಸು ೨೦ ವರ್ಷ. ಈಗ ನಾನು ವಯಸ್ಸಿನ ಆಧಾರದ ಮೇಲೆ ಪಿ.ಯು.ಸಿ. ದ್ವಿತೀಯ ವಿಜ್ಞಾನಕ್ಕೆ ಖಾಸಗಿಯಾಗಿ ಕೂರಬೇಕೆಂದಿದ್ದೇನೆ. ಇದು

ಸಾಧ್ಯವೇ. ಹಾಗಾದರೆ ವಿವರ ಕೊಡಿ. ಹಾಗು ನನ್ನ ತಮ್ಮನು SSLC ಯಲ್ಲಿ ಫೇಲಾಗಿ ಮತ್ತೆ ೩೯.೬೧% ಪಾಸಾಗಿದ್ದಾನೆ. ಈಗ ಆತನು Physio Therophy ಡಿಪ್ಲೊಮೋ ಕೋರ್ಸ್ ಮಾಡಲಿಕ್ಕೆ ಬರುತ್ತದೆಯೋ ಇಲ್ಲವೋ - ಬಂದರೆ ವಿವರ ಕೊಡಿ.

ಖಾಸಗಿಯಾಗಿ ದ್ವಿತೀಯ ಪಿ.ಯುಸಿ. ವಿಜ್ಞಾನಕ್ಕೆ ಕೂರಬಹುದು. ಇದಕ್ಕೆ ಈ ವಿಳಾಸ ಸಂಪರ್ಕಿಸಿ.

IGNOU Regional Centre
No. 293, 39th Cross, VIII Block, Jayanagar, Bangalore - 560 082.

Physio therophy ಡಿಪ್ಲೊಮೋ ಕೋರ್ಸ್‌ನ ಬಗ್ಗೆ ಈ ವಿಳಾಸ ಸಂಪರ್ಕಿಸಿ. All India Medical Council. K.R. Market, Bangalore.

ಸಂತೋಷ, ಸಿದ್ಧಾಪುರ.

ನಾನು SSLCಯಲ್ಲಿ ಶೇಕಡ ೭೫% ಅಂಕಗಳೊಂದಿಗೆ ಪಾಸಾಗಿದ್ದು, PUC ನ್ನು PCMB ನಲ್ಲಿ ಜಸ್ಟ್ ಪಾಸಾಗಿರುತ್ತೇನೆ. (೩೫%) ನನಗೆ ಡಾಕ್ಟರ್ (MBBS) ಮಾಡುವ ಆಸೆ ಇದೆ. ಯಾವುದಾದರೂ Private college ನಲ್ಲಿ ಮಾಡಬಹುದೇ ಹೇಗೆ? ವಿವರವಾಗಿ ತಿಳಿಸಿ. ಎಷ್ಟು ಡೊನೇಷನ್ ಆದರೂ ಪರವಾಗಿಲ್ಲ.

ಈ ಕೋರ್ಸ್ ಸಾಧ್ಯವಾಗದೆ ಇದ್ದಲ್ಲಿ ನಾನು ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡಬಹುದೇ ಹೇಗೆ ತಿಳಿಸಿರಿ ಮತ್ತು ಒಳ್ಳೆಯ ಕಾಲೇಜಿನ ವಿಳಾಸ ತಿಳಿಸಿರಿ.

ಇವೆರಡೂ ಸಾಧ್ಯವಾಗದಿದ್ದಲ್ಲಿ ಕೊನೆ ಪಕ್ಷ ಅತಿ ಒಳ್ಳೆಯ ಹಾಗು ಒಳ್ಳೆ ಉದ್ಯೋಗ ಸಿಗುವ ಕೋರ್ಸ್ ಬಗ್ಗೆ ತಿಳಿಸಿರಿ.

MBBS ಮಾಡಲು PUCಯಲ್ಲಿ ಕನಿಷ್ಠ ಶೇ. ೫೦ ರಷ್ಟು ಅಂಕಗಳನ್ನು ಗಳಿಸಿರಬೇಕು. ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೂ ಸಹ ಕನಿಷ್ಠ ಶೇ. ೫೦ ರಷ್ಟು ಅಂಕಗಳಿಸಿರಬೇಕು. ನಂತರ ಅವರು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು.

ಮರೇಗೌಡ ಮಾಲಿಪಾಟೀಲ, ಮರಿಯಮ್ಮನ ಹಳ್ಳಿ,

ನಾನು ೧೦ನೆಯ ತರಗತಿಯನ್ನು ೧೯೯೫ರಲ್ಲಿ ಪಾಸಾಗಿದ್ದು, ವಯಸ್ಸು ೨೦ ವರ್ಷ. ನಾನು ಈಗ ಡಿಪ್ಲೊಮೋ ಇನ್ ನರ್ಸಿಂಗ್ ಮಾಡಬೇಕೆಂದಿರುವೆ. ದಯವಿಟ್ಟು ಕಾಲೇಜಿನ ವಿಳಾಸ ಹಾಗೂ ಅಡ್ಮಿಶನ್ ದಿನಾಂಕ ತಿಳಿಸಿ. ಮತ್ತು ಇಂದಿರಾಗಾಂಧಿ ಮುಕ್ತ ವಿಶ್ವ ವಿದ್ಯಾಲಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೋರ್ಸ್‌ಗಳು ಇದ್ದರೆ ಅದರಿಂದ ಮುಂದೆ ಉದ್ಯೋಗಕ್ಕೆ ಅನುಕೂಲವಾದ ಕೋರ್ಸ್‌ನ್ನು ದಯವಿಟ್ಟು ತಿಳಿಸಿ ಮತ್ತು ವಿಳಾಸ, ಪ್ರವೇಶ ದಿನಾಂಕವನ್ನು ತಿಳಿಸಿ.

Diploma in Nursing ಮಾಡಲು ನೀವು ನಿಮ್ಮ ಹತ್ತಿರದ ಮೆಡಿಕಲ್ ಕಾಲೇಜನ್ನು ಸಂಪರ್ಕಿಸಿ ಅಥವಾ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ಸೂಪರಿಂಟೆಂಡೆಂಟ್, ನರ್ಸಿಂಗ್ ತರಬೇತಿ ಶಾಲೆ, ಸರ್ಕಾರಿ ಚಿಗಟೇರಿ ಆಸ್ಪತ್ರೆ, ದಾವಣಗೆರೆ. ಅಥವಾ ಬಾಪೂಜಿ ಆಸ್ಪತ್ರೆ, ದಾವಣಗೆರೆ.

ವೀರೇಂದ್ರ ತತ್ತಿಗುಡಿ, ಕುಕನೂರು.

ನಾನು ಈಗ ಪಿ.ಯು.ಸಿ. ಆರ್ಟ್ಸ್ ನ್ನು ವಯಸ್ಸಿನ ಆಧಾರದ ಮೇಲೆ ಮುಗಿಸಿದ್ದು ಮುಂದೆ ಬಿ.ಎ. ಮಾಡಬೇಕೆಂದಿರುವೆ ಮತ್ತು ಈಗ ನಾನು ಬಿ.ಎ. ಫೈನಲ್‌ಗೆ ಕೂರಬಹುದೇ ಮತ್ತು ಆ ಕಾಲೇಜಿನ ವಿಳಾಸವನ್ನು ತಿಳಿಸಿ. ಈ ರೀತಿ ಫೈನಲ್‌ಗೆ ಕೂತು ಪಾಸಾದರೆ ನಾನು ಉದ್ಯೋಗವನ್ನು ಸೇರಲು ಮತ್ತು ಬಿ.ಎಡ್. ಮಾಡಲು ಅರ್ಹನಾಗುತ್ತೇನೆಯೇ ತಿಳಿಸಿರಿ ಮತ್ತು ಪ್ರವೇಶ ದಿನಾಂಕಗಳ ಬಗ್ಗೆ ಕಾಲೇಜಿನ ವಿಳಾಸವನ್ನು ತಿಳಿಸಿರಿ. (ವಯಸ್ಸು ೨೧)

ನೀವು ಖಾಸಗಿಯಾಗಿ ಮೂರು ವರ್ಷದ ಬಿ.ಎಯನ್ನು ಮಾಡಿ. ನಂತರ ಬಿ.ಎಡ್ ಅಥವಾ ಎಂ.ಎ. ಯನ್ನು ಸಹ ಖಾಸಗಿಯಾಗಿ ಮಾಡಬಹುದು. ಇದರಿಂದ ಉದ್ಯೋಗಕ್ಕೆ ಅನುಕೂಲವಾಗುವುದು.

ಹೆಚ್ಚಿನ ಮಾಹಿತಿಗಾಗಿ:
IGNOU Regional Centre
No. 293, 39th Cross, VIII Block, Jayanagar, Bangalore - 560 082.

ಗುರುರಾಜ್, ಹುಬ್ಬಳ್ಳಿ

ನಾನು ಬಿಸಿಲ ಬದುಕು ಮಾಸಪತ್ರಿಕೆಯ ಓದುಗಾರನಾಗಿರುತ್ತೇನೆ. ನಿಮ್ಮ ವಿದ್ಯೆ - ಉದ್ಯೋಗ ಕಾಲಂ ನನಗೆ ಬಹಳ ಇಷ್ಟ ಆಗಿದೆ. ನೀವು MCA ಬಗೆಗೆ ಈ ಕಾಲಂನಲ್ಲಿ ಪೂರ್ಣವಾಗಿ ತಿಳಿಸಬೇಕೆಂದು ನನ್ನ ಆಶಯ.

MCA ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯ. ಈ ಕೋರ್ಸ್ ಸರ್ಕಾರಿ ಮತ್ತು ಖಾಸಗಿ ಕಾಲೇಜ್‌ಗಳಲ್ಲೂ ಲಭ್ಯವಿರುತ್ತದೆ. ಇದರಿಂದ ಉದ್ಯೋಗಕ್ಕೂ ಉತ್ತಮ ಅವಕಾಶಗಳಿರುತ್ತವೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕಾಲೇಜನ್ನು ಸಂಪರ್ಕಿಸಿ.

ಎಸ್. ವಿರುಪಾಕ್ಷಪ್ಪ ನಾಯಕ, ಕೃಷ್ಣಾಪುರ.

ನಾನು ೨೭ ವರ್ಷದ ಯುವಕ. ಎಸ್.ಎಸ್.ಎಲ್. ಸಿ ಯನ್ನು ೧೯೮೫ರಲ್ಲಿ ಪಾಸು ಮಾಡಿ ಮುಂದೆ ಕಾರಣಾಂತರಗಳಿಂದ ಪಿ.ಯು.ಸಿ ಮಾಡಲಾಗಲಿಲ್ಲ. ೧೯೯೩-೯೫ರ ಸಾಲಿನಲ್ಲಿ I.T.I. ಟೆಕ್ನಿಕಲ್ ಕೋರ್ಸ್ ತರಬೇತಿ ಪಡೆದು ಪಾಸಾದೆ. ಈ ಮಧ್ಯೆ ವಯಸ್ಸಿನ ಆಧಾರದ ಮೇಲೆ ನೇರವಾಗಿ ದ್ವಿತೀಯ ಪಿ.ಯು.ಸಿ ಪರೀಕ್ಷೆ ಬರೆದು ಪಾಸಾದೆ. ಆದರೆ ಈಗ ನನಗೆ ತಿಳಿಯದಿರುವ ವಿಷಯವೇನೆಂದರೆ ವಯಸ್ಸಿನ ಆಧಾರದ ಮೇಲೆ ನೇರವಾಗಿ ನನಗೆ ಬಿ.ಎ. ಅಂತಿಮ ವರ್ಷದ ಪರೀಕ್ಷೆಯನ್ನು ನಾನು ಕಟ್ಟಬಹುದೇ? ಹಾಗೆ ಕಟ್ಟುವ ಅವಕಾಶವಿದ್ದರೆ ಅದು ಯಾವ ವಿಶ್ವವಿದ್ಯಾಲಯ/ಕಾಲೇಜಿನಿಂದ ಕಟ್ಟಬೇಕು. ಅದರ ವಿಳಾಸ ಏನು? ತಾವು ದಯವಿಟ್ಟು ಇದರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿ ಪ್ರಾರ್ಥನೆ.

ವಯಸ್ಸಿನ ಆಧಾರದ ಮೇಲೆ ನೀವು ನೇರವಾಗಿ ಬಿ.ಎ. ಪರೀಕ್ಷೆಯನ್ನು ಅಂಚೆ ಶಿಕ್ಷಣದ ಮೂಲಕ ಮಾಡಬಹುದು. ನೀವು ನಿಮಗೆ ಹತ್ತಿರವಿರುವ ಯಾವುದೇ ವಿಶ್ವ ವಿದ್ಯಾಲಯಗಳಲ್ಲಿ ವಿಚಾರಿಸಿ.

ಆರ್. ಬಿ. ಅರವಿಂದ, ದಿದ್ದಿಗೆ.

ಈ ಪತ್ರ ಬರೆಯಲು ಕಾರಣವೇನೆಂದರೆ, ನಾನು ಅಂದರೆ, ಆರ್. ಬಿ. ಅರವಿಂದ BSC-Computer Science ಮಾಡುತ್ತಿದ್ದೇನೆ. ಕೋಟೇಶ್ವರ ಕಾಲೇಜ್ ಕೊಟ್ಟೂರು. ನನಗೆ ಮುಂದೆ MCA ಅಥವಾ MBA ಎರಡರಲ್ಲಿ ಒಂದನ್ನು ಮಾಡಬೇಕೆಂದು ಆಸೆ. ಆದ್ದರಿಂದ ನೀವು ಇದರ ಬಗ್ಗೆ ನಿಮ್ಮ ಅನಿಸಿಕೆ ಮತ್ತು ಪೂರ್ಣವಿಷಯವನ್ನು ತಿಳಿಸಿ. ಮತ್ತು BSC-Computer Science ಮುಗಿಸಿದ ಮೇಲೆ ಪ್ರವೇಶ ಪರೀಕ್ಷೆಗೆ ಹೇಗೆ ತಯಾರಾಗಬೇಕು ಮತ್ತು ಇವೆರಡರಲ್ಲಿ ಯಾವುದನ್ನು ಮಾಡಿದರೆ ಉತ್ತಮ. ಮತ್ತು ಸಾಮಾನ್ಯ ವಿದ್ಯಾರ್ಥಿಗಳು

ಮಾಡಲು ಸಾಧ್ಯವೆ ತಿಳಿಸಿ. ಮತ್ತು ಪ್ರವೇಶ ಪರೀಕ್ಷೆಯ "Model question paper' ಗಳನ್ನು ಕಳುಹಿಸಿ. ಇದರ Post ಖರ್ಚು ಎಷ್ಟಾದರೂ ಪರವಾಗಿಲ್ಲ. ಒಂದು Book ನಲ್ಲಿ ಎಲ್ಲಾ ವಿಷಯವನ್ನು ಸರಳವಾಗಿ ಅರ್ಥವಾಗುವಂತೆ ಬರೆದು ಮತ್ತು MBA, MCA Centre ಗಳಿಗೆ application ನಲ್ಲಿ ಹೇಗೆ Apply ಮಾಡಬೇಕು ಎಂಬುದನ್ನು ವಿವರವಾಗಿ ಪುಸ್ತಕದಲ್ಲಿ ಬರೆದು Post ಮುಖಾಂತರ ಕಳುಹಿಸಿ. ನಾನು ಹಣ ಪಾವತಿ ಮಾಡಿ ಪುಸ್ತಕವನ್ನು ಪಡೆಯುತ್ತೇನೆ.

ಇನ್ನೊಂದು ವಿಷಯ. BSC Computer Science ಮುಗಿಸಿದ ಮೇಲೆ ಮತ್ತೆ ಯಾವ Course ಇದೆ. ಅದರ ಬಗ್ಗೆ ಸಹ ತಿಳಿಸಿ.

ಇದನ್ನು ಕಂಡ ತಕ್ಷಣ ಮರೆಯದೆ ನಿಮ್ಮ ಉತ್ತರವನ್ನು ಕಳಿಸಿ. ನನಗೆ BSc Computer Science ಮುಗಿಸಿದ ಮೇಲೆ MCA, MBA ಅಥವಾ ಬೇರೆ ಇದಕ್ಕೆ ಸಮನಾದ Course ಇದ್ದರೆ ತಿಳಿಸಿ.

ಏಕೆಂದರೆ ನಾವು ಬಡವರು. ಹಣದಿಂದ ಯಾವ ಕೋರ್ಸ್‌ಗೆ ಹೋಗುವುದೂ ನಮ್ಮಿಂದ ಅಸಾಧ್ಯ. ಆದ್ದರಿಂದ ನಾನು ಏನಿದ್ದರೂ Government seatನ್ನು ತೆಗೆದುಕೊಂಡು ಹೋಗಬೇಕು. ಆದ್ದರಿಂದ ಅದಕ್ಕೆ ನನಗೆ ಸಹಾಯ ಮಾಡಿ ನನಗೆ MCA, MBAಗೆ ಹೋಗಲು ಅನುಕೂಲವಾದ ಎಲ್ಲಾ ತರಹದ ಮಾಹಿತಿಗಳನ್ನು ಒಂದು ಪುಸ್ತಕದಲ್ಲಿ ಬರೆದು ಕಳಿಸಿ.

MBA ಮತ್ತು MCA ಎರಡೂ ಕೋರ್ಸ್‌ಗಳು ಉತ್ತಮವಾದದು ಮತ್ತು ಬೇರೆ ಬೇರೆಯಾದವು. ನೀವು BSC Computer Science ಓದಿರುವುದರಿಂದ MCA ನಿಮಗೆ ಅನುಕೂಲ. MBA ನಿಮ್ಮ ಹೆಚ್ಚಿನ ಆಸಕ್ತಿ ಇದ್ದಲ್ಲಿ ಅದನ್ನು ಮಾಡಬಹುದು. ಈ ಎರಡು ಕೋರ್ಸ್‌ಗಳಿಗೂ ಹೆಚ್ಚಿನ ಉದ್ಯೋಗ ಅವಕಾಶಗಳಿವೆ, ಇದರಲ್ಲಿ ಆಯ್ಕೆ ನಿಮ್ಮ ಇಚ್ಛೆಗೆ ಬಿಟ್ಟದ್ದು. ಈ ಕೋರ್ಸ್‌ಗಳನ್ನು ಸಾಮಾನ್ಯ ಅಭ್ಯರ್ಥಿಗಳು ಮಾಡಲು ಸಾಧ್ಯ. ಕಠಿಣ ಪರಿಶ್ರಮ, ಶ್ರದ್ಧೆ ಇವು ಮುಖ್ಯ. ಇದರ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ಬರುತ್ತದೆ. ದಿನಪತ್ರಿಕೆಗಳನ್ನು ಗಮನಿಸುವುದು ಒಳ್ಳೆಯದು. BSC ಮುಗಿದ ನಂತರ ಅನೇಕ Computer ಕೋರ್ಸ್‌ಗಳು ಲಭ್ಯ. ಈ

...ರಣಾಂತರಗಳಿಂದ Diploma in Computer Science ಸೇರಿ II Class ನಲ್ಲಿ ಪಾಸ್ ಮಾಡಿದ್ದೇನೆ. ಆದರೂ Computer Fieldನಲ್ಲಿ ಆಸಕ್ತಿ ಇಲ್ಲ. MBBS ಮಾಡಬೇಕೆಂಬ ಬಯಕೆ ಹಾಗೆಯೇ ಇದೆ. PUCಯ ಶೇಕಡವಾರು ಅಂಕಗಳನ್ನು ...ಚ್ಚಿಸಲು ಈ ಹಿಂದೆ ವ್ಯಾಸಂಗ ಮಾಡಿದ ...ಲೇಜನ್ನು ಹೊರತು ಪಡಿಸಿ ಬೇರೆ ...ಲೇಜನಲ್ಲಿ II PUC Re-admission ಬೇಡಿಸಬಹುದೇ?

ಮಾ... MBBSನ್ನು Govt college ನಲ್ಲಿ ದಯ... ...ಂಗ ಮಾಡಲು ಅನುಕೂಲವಾಗಿದ್ದೇನೆ.)

...ಕುರಿತು ಮಾಹಿತಿ ನೀಡಬೇಕೆಂದು ಆಗ... ...ುತ್ತೇನೆ.

ment... ...ವು ಯಾವುದಾದರೂ PUC ಆಹ್ವಾ... ...ಜಿನಲ್ಲಿ ಈ ವಿಚಾರವನ್ನು ತಿಳಿದುಕೊಳ್ಳಿ. ಅಂಕಗ... ಅವರೆ...

...ೇಶ್‌ಕುಮಾರ್, ರಾಯಚೂರು.

ಸು...ಹೊಬ್ಬ ಬಡವ. BA III year ನನ್ನ... ...ಕಟ್ಟಿದ್ದೇನೆ. ಪಾಸಾಗುತ್ತೇನೆ. B.A II ನನಗೆ LI... ಪಾಸಾಗುತ್ತೇನೆಂಬ ಭರವಸೆ ಅದಕ್ಕಾಗಿ ...ನಗೆ ಓದಬೇಕು ಎಂಬ ಆಸೆ ಬಹಳ ಪುಸ್ತಕ ...ವಿಲ್ಲ. ನಮ್ಮ ತಾಯಿ ಖಾಸಗಿ ನಿಮ್ಮ ಉತ್ತ... ...ರಲ್ಲಿ ಆಯಾ ಕೆಲಸ ಮಾಡುತ್ತಾರೆ. BSc De... ...ನೆಯವರ ಕೈಕಾಲಿಗೆ ಪಾರ್ಸಿ ಹೊಡೆ... ದಯವಿಟ್ಟು... ಮಾಡಬೇಕೆಂದರೆ 50,000 ...ಅಷ್ಟು ಹಣವಿಲ್ಲ. ಆದುದರಿಂದ

ನೀವು L... ...ಏನು ಮಾಡಬೇಕು ಎಂಬ ಕೆಂದರೆ, ನೀವ... ನೀವು ನನಗೆ ಮಾರ್ಗದರ್ಶನ ಆಗಬಹುದು. ...ವಿನಂತಿಸಿಕೊಳ್ಳುತ್ತೇನೆ. ದಯ opment offic... ...ಸಿಕೊಳ್ಳಬೇಡಿ. ನನಗೆ ಬುದ್ಧಿ ಮಾಹಿತಿ ಪಡೆಯ... ...ಾರೂ ಇಲ್ಲ. ಆದುದರಿಂದ ಯಾಗಲೂ LIC... ಮುಗಿದ ನಂತರ ಅಂದರೆ ಗಳಿಗೆ ತಾವು ಅರ್ಜಿ... ...ೇಕೆಂದು ತಿಳಿಸಬೇಕೆಂದು ಸ್ಪರ್ಧಾತ್ಮಕ ಪರೀ... ...ತ್ತೇನೆ. LIC ಯಲ್ಲಿ ಕೆಲಸ...

...ಓದಿ III year ...ಅಂಕಗಳನ್ನು ಗಳಿಸಿದರೆ

ಎಸ್. ಎಮ್. ಮಾ... ...ಲ್ಲಿ B.Ed ಸೀಟ್

ಸರ್, ನಾನು ಪಿ.ಯು... ತಾವು ಹಣಕಾಸಿನ (Science)ನಲ್ಲಿ ಶೇಕಡ... ...ದ ವಿದ್ಯಾಭ್ಯಾಸ ಜೊತೆ ಪಾಸಾಗಿದ್ದೇನೆ. ಈಗ... ...t time ಕೆಲಸ ಮಾಡಬೇಕೆಂದಿರುವೆ. ...ಷ್ಯ ಉತ್ತಮವಾಗಿರಲಿ. ಸರ್ಕಾರಿ ಟಿ.ಸಿ. ಎಚ್...

ಕಲಾವತಿ, ಬ್ರಹ್ಮೇಶ್ವರ.

ನಾನು ದ್ವಿತೀಯ ಪಿ.ಯು.ಸಿ (ಸಮಾಜ) ವಿಷಯದ ಬಗ್ಗೆ ಅಧ್ಯಯನ ಮಾಡಿದ್ದೇನೆ. (೪೫%) ನಾನು ಮುಂದೆ ಪೊಲೀಸ್ ಆಗಬೇಕೆಂದಿದ್ದೇನೆ. ಅದಕ್ಕೆ ಯಾವ ತಿಂಗಳು ಅರ್ಜಿ ಹಾಕಬೇಕು. ಅದು ಎಲ್ಲಿ ಸಿಗುತ್ತವೆ ಮತ್ತು ಅದಕ್ಕೆ ಏನು ಮಾಹಿತಿ ಬೇಕು. ದಯವಿಟ್ಟು ತಿಳಿಸಿ (ವರ್ಷ ೨೨, ಎತ್ತರ ೫ ಅಡಿ



ಮನೆ ಅಂದ್ರೆ ಅಷ್ಟು ಗೊತ್ತಾಗಲ್ವಾ, ಎಲ್ಲಿ ಲಟ್ಟಣಿಗೆ, ಪೊರಕೆಗಳ ಬಳಕೆಯಾಗುತ್ತದೆಯೋ - ಅದುವೇ ಮನೆ

೨ ಇಂಚು ತೂಕ - ೪೬ ಕೆ.ಜಿ.)

ನೀವು ಪೊಲೀಸ್ ಆಗಲು ನೀವು ನಿಮ್ಮ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಣಿ ಮಾಡಿಸಬೇಕು. ಪೊಲೀಸ್ ಇಲಾಖೆಯಲ್ಲಿ ಪೊಲೀಸರ ಅವಶ್ಯಕತೆ (ಖಾಲಿ ಹುದ್ದೆಗಳಭರ್ತಿ) ಉಂಟಾದಾಗ ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರುಗಳನ್ನು ತರಿಸಿಕೊಂಡು, ಮೊದಲು ಶಾರೀರಿಕ ಅರ್ಹತೆ ಅಂದರೆ ತೂಕ ೫೦ ಕೆಜಿ, ಎತ್ತರ ೧೫೭ (157).c.mಗಳನ್ನು ಪರೀಕ್ಷಿಸುತ್ತಾರೆ ನಂತರ ರನ್ನಿಂಗ್‌ರೇಸ್, ಹೈಜಂಪ್, ಲಾಂಗ್‌ಜಂಪ್ ಮುಂತಾದ ಪರೀಕ್ಷೆಗಳನ್ನು ನಡೆಸಿ ಆಯ್ಕೆ ಮಾಡುತ್ತಾರೆ.

ಸಾಧ್ಯವೇ. ಹಾಗಾದರೆ ವಿವರ ಕೊಡಿ. ಹಾಗು ನನ್ನ ತಮ್ಮನು SSLC ಯಲ್ಲಿ ಫೇಲಾಗಿ ಮತ್ತೆ ೩೯.೬೧% ಪಾಸಾಗಿದ್ದಾನೆ. ಈಗ ಆತನು Physio Therophy ಡಿಪ್ಲೊಮೋ ಕೋರ್ಸ್ ಮಾಡಲಿಕ್ಕೆ ಬರುತ್ತದೆಯೋ ಇಲ್ಲವೋ - ಬಂದರೆ ವಿವರ ಕೊಡಿ.

ಖಾಸಗಿಯಾಗಿ ದ್ವಿತೀಯ ಪಿ.ಯುಸಿ. ವಿಜ್ಞಾನಕ್ಕೆ ಕೂರಬಹುದು. ಇದಕ್ಕೆ ಈ ವಿಳಾಸ ಸಂಪರ್ಕಿಸಿ.

IGNOU Regional Centre
No. 293, 39th Cross, VIII Block,
Jayanagar, Bangalore - 560 082.

Physio therophy ಡಿಪ್ಲೊಮೋ ಕೋರ್ಸ್‌ನ ಬಗ್ಗೆ ಈ ವಿಳಾಸ ಸಂಪರ್ಕಿಸಿ. All India Medical Council. K.R. Market, Bangalore.

ಸಂತೋಷ, ಸಿದ್ದಾಪುರ.

ನಾನು SSLCಯಲ್ಲಿ ಶೇಕಡ ೭೫% ಅಂಕಗಳೊಂದಿಗೆ ಪಾಸಾಗಿದ್ದು, PUC ನ್ನು PCMB ನಲ್ಲಿ ಜಸ್ಟ್ ಪಾಸಾಗಿರುತ್ತೇನೆ. (೩೫%) ನನಗೆ ಡಾಕ್ಟರ್ (MBBS) ಮಾಡುವ ಆಸೆ ಇದೆ. ಯಾವುದಾದರೂ Private college ನಲ್ಲಿ ಮಾಡಬಹುದೇ ಹೇಗೆ? ವಿವರವಾಗಿ ತಿಳಿಸಿ. ಎಷ್ಟು ಡೊನೇಷನ್ ಆದರೂ ಪರವಾಗಿಲ್ಲ.

ಈ ಕೋರ್ಸ್ ಸಾಧ್ಯವಾಗದೆ ಇದ್ದಲ್ಲಿ ನಾನು ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡಬಹುದೇ ಹೇಗೆ ತಿಳಿಸಿರಿ ಮತ್ತು ಒಳ್ಳೆಯ ಕಾಲೇಜಿನ ವಿಳಾಸ ತಿಳಿಸಿರಿ.

ಇವೆರಡೂ ಸಾಧ್ಯವಾಗದಿದ್ದಲ್ಲಿ ಕೊನೆ ಪಕ್ಷ ಅತಿ ಒಳ್ಳೆಯ ಹಾಗು ಒಳ್ಳೆ ಉದ್ಯೋಗ ಸಿಗುವ ಕೋರ್ಸ್ ಬಗ್ಗೆ ತಿಳಿಸಿರಿ.

MBBS ಮಾಡಲು PUCಯಲ್ಲಿ ಕನಿಷ್ಠ ಶೇ. ೫೦ ರಷ್ಟು ಅಂಕಗಳನ್ನು ಗಳಿಸಿರಬೇಕು. ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೂ ಸಹ ಕನಿಷ್ಠ ಶೇ. ೫೦ ರಷ್ಟು ಅಂಕಗಳಿಸಿರಬೇಕು. ನಂತರ ಅವರು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು.

ಮರೇಗೌಡ ಮಾಲಿಪಾಟೀಲ, ಮರಿಯಮ್ಮನ ಹಳ್ಳಿ,

ನಾನು ೧೦ನೆಯ ತರಗತಿಯನ್ನು ೧೯೯೫ರಲ್ಲಿ ಪಾಸಾಗಿದ್ದು, ವಯಸ್ಸು ೨೦ ವರ್ಷ. ನಾನು ಈಗ ಡಿಪ್ಲೊಮೋ ಇನ್ ನರ್ಸಿಂಗ್ ಮಾಡಬೇಕೆಂದಿರುವೆ. ದಯವಿಟ್ಟು ಕಾಲೇಜಿನ ವಿಳಾಸ ಹಾಗೂ ಅಡ್ಮಿಶನ್ ದಿನಾಂಕ ತಿಳಿಸಿ. ಮತ್ತು ಇಂದಿರಾಗಾಂಧಿ ಮುಕ್ತ ವಿಶ್ವ ವಿದ್ಯಾಲಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೋರ್ಸ್‌ಗಳು ಇದ್ದರೆ ಅದರಿಂದ ಮುಂದೆ ಉದ್ಯೋಗಕ್ಕೆ ಅನುಕೂಲವಾದ ಕೋರ್ಸ್‌ನ್ನು ದಯವಿಟ್ಟು ತಿಳಿಸಿ ಮತ್ತು ವಿಳಾಸ, ಪ್ರವೇಶ ದಿನಾಂಕವನ್ನು ತಿಳಿಸಿ.

Diploma in Nursing ಮಾಡಲು ನೀವು ನಿಮ್ಮ ಹತ್ತಿರದ ಮೆಡಿಕಲ್ ಕಾಲೇಜನ್ನು ಸಂಪರ್ಕಿಸಿ ಅಥವಾ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ಸೂಪರಿಂಟೆಂಡೆಂಟ್, ನರ್ಸಿಂಗ್ ತರಬೇತಿ ಶಾಲೆ, ಸರ್ಕಾರಿ ಚಿಗಟೇರಿ ಆಸ್ಪತ್ರೆ ದಾವಣಗೆರೆ. ಅಥವಾ ಬಾಪೂಜಿ ಆಸ್ಪತ್ರೆ ದಾವಣಗೆರೆ.

ವೀರೇಂದ್ರ ತತ್ತಿಗುಡಿ, ಕುಕನೂರು.

ನಾನು ಈಗ ಪಿ.ಯು.ಸಿ. ಆರ್ಟ್ಸ್
ವಯಸ್ಸಿನ ಆಧಾರದ ಮೇಲೆ ಮುಗಿ
ಮುಂದೆ ಬಿ.ಎ. ಮಾಡಬೇಕೆಂದಿರುವೆ
ಈಗ ನಾನು ಬಿ.ಎ. ಫೈನಲ್‌ಗೆ ಕೂರಬ… ಲಬರ್ಗಾ
ಮತ್ತು ಆ ಕಾಲೇಜಿನ ವಿಳಾಸವನ್ನು ತಿ… ದ ಬಿ.ಎ.
ರೀತಿ ಫೈನಲ್‌ಗೆ ಕೂತು ಪಾಸಾದರೆ… ತ್ತಿದ್ದೇನೆ.
ಉದ್ಯೋಗವನ್ನು ಸೇರಲು ಮತ್ತು… ವರ್ಷದ
ಮಾಡಲು ಅರ್ಹನಾಗುತ್ತೇನೆಯೇ… ತೃತೀಯ
ಮತ್ತು ಪ್ರವೇಶ ದಿನಾಂಕಗಳ ಬಗ್ಗೆ… ಗಬಹುದು.
ವಿಳಾಸವನ್ನು ತಿಳಿಸಿರಿ. (ವಯಸ್ಸು… ದೆ. ಅಂಕಗಳು
… ಸಾಧ್ಯ ಇಲ್ಲ

ನೀವು ಖಾಸಗಿಯಾಗಿ ಮೂ… ಬರ್ಗಾ ವಿಶ್ವ
ಬಿ.ಎಯನ್ನು ಮಾಡಿ. ನಂತ… ಬಿ.ಎ. ಮುಗಿಸಿ
ಅಥವಾ ಎಂ.ಎ. ಯನ್ನು ಸಹ… ವಿದ್ಯಾಲಯದಲ್ಲಿ
ಮಾಡಬಹುದು. ಇದರಿಂದ… ಎ? ಗುಲಬರ್ಗಾ
ಅನುಕೂಲವಾಗುವುದು.… ಬಿ.ಎ. ಪರೀಕ್ಷೆ

ಹೆಚ್ಚಿನ ಮಾಹಿತಿಗಾಗಿ:… , ಅಥವಾ ಫೇಲಾ
IGNOU Regional Cen… ಎಲಿಗೆ ಪುನಃ ಬಿ.ಎ.
No. 293, 39th Cross… ಮಾಗದರ್ಶನ ನೀಡಿ.
Jayanagar, Bangalo…
… ತು ದ್ವಿತೀಯ ಬಿ.ಎ.

ಗುರುರಾಜ್, ಹುಬ್ಬ… ದ್ದರೂ ಸಹ ಅಂತಿಮ
ನಾನು ಬಿಸಿಲ ಬದು… ಅಂಕ ಗಳಿಸಿ ಸರಾಸರಿ
ಓದುಗಾರನಾಗಿರುತ್ತೇನೆ.… ಳ್ಳುವ ಅವಕಾಶವಿದೆ.
-ಉದ್ಯೋಗ ಕಾಲಂ ನನ್ನ… ದ್ಯಾಲಯಗಳಲ್ಲಿ ಪುನಃ
ನೀವು MCA ಬಗ್ಗೆ…
ಪೂರ್ಣವಾಗಿ ತಿಳಿಸಬೇಕೆ

ಶಶಿಧರ ವಿ. ಕಣವಿಮಠ, ಬಾಗಲಕೋಟೆ.

ನಾನು ಒಬ್ಬ ವಿದ್ಯಾರ್ಥಿ. ಎಷ್ಟು ಕಷ್ಟಪಟ್ಟರೂ ನಾನು BSc IIIನ್ನು II Class ನಲ್ಲಿ ಪಾಸಾಗಿದ್ದೆನು. ಮುಂದೆ ಓದಲು ಹಂಬಲ ವಿತ್ತು. ಆದರೆ ಬಡತನದ ಪರಿಸ್ಥಿತಿಯಲ್ಲಿ ಮುಂದೆ ಓದಲು ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ಕಲಿತ ಕಾಲೇಜಿನಲ್ಲಿ ಒಂದು ಹುದ್ದೆಯನ್ನು ನೀಡಬೇಕೆಂದು ಕೋರಿಕೆ ಸಲ್ಲಿಸಿದಾಗ ನನಗೆ (Peon) ಸಿಪಾಯಿಯ ಹುದ್ದೆಯನ್ನು ನೀಡಿದರು. ಬಸವೇಶ್ವರ ವಿಜ್ಞಾನ ಮಹಾ ವಿದ್ಯಾಲಯದಲ್ಲಿ ಕಲಿತ ನಾನು ಈಗ peon ಹುದ್ದೆಯನ್ನು ಮಾಡಬೇಕಾಯಿತು. ನನ್ನ combination SBZ i.e. Sericulture, Botony, Zoology. ನಾನು Sericulture ನಲ್ಲಿ ಅಂದರೆ ರೇಷ್ಮೆ ಗೂಡು ಬಿಡಿಸುವ ಹಾಗು ನೂಲನ್ನು ಬಿಡಿಸುವ Trainingನ್ನು Rayapureನಲ್ಲಿ ಮುಗಿಸಿದ್ದೇನೆ. ಆದ್ದರಿಂದ ಪ್ರಾಚಾರ್ಯರನ್ನು ಉದ್ದೇಶಿಸಿ ನನಗೆ reeling expert ಎನ್ನುವ ಹುದ್ದೆಯನ್ನು ನೀಡಿ ಎಂದರೆ ಅವರು ನನಗೆ ಆ ಹುದ್ದೆಯನ್ನು ಕೊಡಲಿಲ್ಲ. ನೀನು peon ಆಗಿ ಕೆಲಸ ಮಾಡುವುದಿದ್ದರೆ ಮಾಡು. ಇಲ್ಲವೆ Resign ಮಾಡಿ ಹೋಗು ಎಂದರು. ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಏಕೆಂದರೆ ನಾನು ಒಬ್ಬ ಡಿಗ್ರಿ ಮುಗಿಸಿ peon ಕೆಲಸ ಮಾಡುವುದು ಮತ್ತು ನನ್ನ ಕಾಲೇಜಿನಲ್ಲಿಯೇ ಮಾಡುವುದು ಮನಸ್ಸಿಗೆ ತುಂಬಾ ನೋವಾಗುತ್ತದೆ. ಆದ್ದರಿಂದ ತಾವು ನನಗೆ ಸೂಕ್ತ ಮಾಗದರ್ಶನ ನೀಡ ಬೇಕೆಂದು ಕೇಳುತ್ತೇನೆ.

Sericulture Department ನಲ್ಲಿ Sericulture Degree ಆದವರಿಗೆ ಯಾವಾಗ ನೌಕರಿಗಾಗಿ ಕರೆಯುತ್ತಾರೆ ತಿಳಿಸಿ.

ಎರಡನೆಯ ವಿಷಯವೆಂದರೆ ನಾನು Annamalai University ಯಲ್ಲಿ Environmental Science ಯೆಂಬ correspondence course ನ್ನು ಮುಗಿಸ ಬೇಕೆಂದಿದ್ದೇನೆ. ಒಂದು ವೇಳೆ ಅಲ್ಲಿ ಸಿಗಲಿಲ್ಲ ವೆಂದರೆ ಮಾನಸಗಂಗೋತ್ರಿಯಲ್ಲಿ ಹಿಂದಿ ವಿಷಯದಲ್ಲಿ M.A ಮಾಡಬೇಕೆಂದಿದ್ದೇನೆ. ಒಂದು ವೇಳೆ ನಾನು M.A ಮುಗಿಸಿದರೆ ನನಗೆ ಉಪನ್ಯಾಸಕ ಹುದ್ದೆ ನೀಡುವರೇ ಅಥವಾ ಇಲ್ಲವೆ ಎಂಬುದನ್ನು ತಿಳಿಸಿ.

ಕೆಲಸದಲ್ಲಿ ಯಾವ ಹುದ್ದೆಯೂ ಕೀಳಲ್ಲ.

ತಮ್ಮ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಗಳು ಸಿಗುವುದು ದುರ್ಲಭ. ತಾವು ತಮಗೆ ದೊರೆತಿರುವ ಹುದ್ದೆಯಲ್ಲೇ ಪ್ರಾಮಾಣಿಕ ಮತ್ತು ಶ್ರದ್ಧೆಯಿಂದ ಕೆಲಸ ಮಾಡಿದಲ್ಲಿ ತಮಗೆ ತಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳು ಸಿಗುವ ಅವಕಾಶವಿರುತ್ತದೆ. ನಿಮ್ಮ ಶ್ರದ್ಧೆಯನ್ನು ನೋಡಿ ನಿಮ್ಮ ಕಾಲೇಜ್‌ನಲ್ಲೇ ಉತ್ತಮ ಕೆಲಸ ದೊರೆಯಬಹುದು. ಇದರ ಜೊತೆಗೆ ದಿನ ಪತ್ರಿಕೆಗಳಲ್ಲಿ ಕರೆಯುವ ವಿವಿಧ ಇಲಾಖೆಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಅಲ್ಲಿಯೂ ಪ್ರಯತ್ನಿಸಬಹುದು. ನಿಮ್ಮ ಭವಿಷ್ಯಕ್ಕೆ ಒಳ್ಳೆಯದಾಗಲಿ.

ನೀವು ಹಿಂದಿ M.A. ಮಾಡಿದಲ್ಲಿ ಉಪನ್ಯಾಸಕರ ಹುದ್ದೆಗೆ ಅರ್ಹರಾಗುತ್ತೀರಿ.

ಪಿ.ಎಚ್., ಊರು ಬೇಡ.

ನಾನು ಪಿ.ಯು.ಸಿ. ಪ್ರಥಮ ವಿಜ್ಞಾನ ವಿಭಾಗದಲ್ಲಿ ಅನುತ್ತೀರ್ಣ ನಾಗಿದ್ದೇನೆ. ನಾನು ಎಸ್. ಎಸ್. ಎಲ್.ಸಿ.ಯಲ್ಲಿ ತೃತೀಯ ದರ್ಜೆಯಲ್ಲಿ ಪಾಸಾಗಿರುತ್ತೇನೆ. ನಾನು ಈಗ ಏನು ಮಾಡಲಿ?

ನೀವು PUC ಯಲ್ಲಿ ಅನುತ್ತೀರ್ಣ ಮತ್ತು SSLC ಯಲ್ಲಿ ತೃತೀಯ ದರ್ಜೆ ಎಂಬ ನಿರಾಶೆ ಬೇಡ. ಹಿಂದಿನವನ್ನು ಚಿಂತಿಸಬೇಡ. SSLC ಆಧಾರದ ಮೇಲೆ ಅನೇಕ ವೃತ್ತಿ ತರಬೇತಿ ಕೋರ್ಸ್‌ಗಳು ಲಭ್ಯವಿರುತ್ತವೆ. ಅಂತಹ ಕೋರ್ಸ್‌ಗಳನ್ನು ಮಾಡುವುದು ಒಳ್ಳೆಯದು. ಇದಕ್ಕೆ ಹತ್ತಿರದ ITI ಕಾಲೇಜನ್ನು ಸಂಪರ್ಕಿಸಿ. ಹೆಚ್ಚಿನ ಮಾಹಿತಿ ತಿಳಿದುಕೊಳ್ಳಿ.

ಎಸ್. ಶಿವರಾಜು, ಯಾದಗಿರಿ.

ನಾನು ಎಸ್. ಶಿವರಾಜು ಬಿ.ಎಸ್ಸಿ ಮುಗಿಸಿದ್ದೇನೆ. ಬಿ.ಎಸ್ಸಿ.ಯಲ್ಲಿ ಕಂಪ್ಯೂಟರ್ ಸೈನ್ಸ್. ನನಗೆ MCA ಮಾಡಲು ಆಗುವುದಿಲ್ಲ. ಬಿ.ಇಡಿ ಮಾಡಲು ಬಯಸಿದ್ದೇನೆ. ಇನ್ನು ಬೇರೆ ಯಾವ ಕೋರ್ಸ್ ಮಾಡಬಹುದು. ತಿಳಿಸಿರಿ.

ಕಂಪ್ಯೂಟರ್‌ನಲ್ಲಿ ಅನೇಕ ಕೋರ್ಸ್‌ಗಳು ಲಭ್ಯವಿರುತ್ತವೆ. ಇವುಗಳನ್ನು ಖಾಸಗಿ ಕಂಪ್ಯೂಟರ್ ಸೆಂಟರ್‌ಗಳಲ್ಲಿ ಮಾಡಬಹುದು.

ಎ. ವೆಂಕಟೇಶ, ಮೈಸೂರು.

ನನಗೆ PUC (Scince)ನಲ್ಲಿ ೫೭% ಅಂಕಗಳು ಬಂದಿವೆ. ನನಗೆ MBBS ಮಾಡಬೇಕೆಂಬ ಆಸೆ ಬಹಳ ಇತ್ತು. ಕಾರಣಾಂತರಗಳಿಂದ Diploma in Computer Science ಸೇರಿ II Class ನಲ್ಲಿ ಪಾಸ್ ಮಾಡಿದ್ದೇನೆ. ಆದರೂ Computer fieldನಲ್ಲಿ ಆಸಕ್ತಿ ಇಲ್ಲ. MBBS ಮಾಡಬೇಕೆಂಬ ಬಯಕೆ ಹಾಗೆಯೇ ಇದೆ. PUCಯ ಶೇಕಡವಾರು ಅಂಕಗಳನ್ನು ಹೆಚ್ಚಿಸಲು ಈ ಹಿಂದೆ ವ್ಯಾಸಂಗ ಮಾಡಿದ ಕಾಲೇಜನ್ನು ಹೊರತು ಪಡಿಸಿ ಬೇರೆ ಕಾಲೇಜನಲ್ಲಿ II PUC Re-admission ಮಾಡಿಸಬಹುದೇ?

(MBBSನ್ನು Govt college ನಲ್ಲಿ ವ್ಯಾಸಂಗ ಮಾಡಲು ಅನುಕೂಲವಾಗಿದ್ದೇನೆ.)

ಈ ಕುರಿತು ಮಾಹಿತಿ ನೀಡಬೇಕೆಂದು ಕೋರುತ್ತೇನೆ.

ನೀವು ಯಾವುದಾದರೂ PUC ಕಾಲೇಜಿನಲ್ಲಿ ಈ ವಿಚಾರವನ್ನು ತಿಳಿದುಕೊಳ್ಳಿ.

ಕೆ. ಪ್ರವೀಣ್‌ಕುಮಾರ್, ರಾಯಚೂರು.

ನಾನೊಬ್ಬ ಬಡವ. BA III year Exam ಕಟ್ಟಿದ್ದೇನೆ. ಪಾಸಾಗುತ್ತೇನೆ. B.A II Classನಲ್ಲಿ ಪಾಸಾಗುತ್ತೇನೆಂಬ ಭರವಸೆಯಿಂದ ನನಗೆ ಓದಬೇಕು ಎಂಬ ಆಸೆ ಬಹಳ ಇದೆ. ಹಣವಿಲ್ಲ. ನಮ್ಮ ತಾಯಿ ಖಾಸಗಿ ದವಾಖಾನೆಯಲ್ಲಿ ಆಯಾ ಕೆಲಸ ಮಾಡುತ್ತಾರೆ. ಹಾಗೂ ತಂದೆಯವರ ಕೈಕಾಲಿಗೆ ಪಾರ್ಶಿ ಹೊಡೆದಿದೆ. B.Ed ಮಾಡಬೇಕೆಂದರೆ 50,000 ಬೇಕಾಗುತ್ತದೆ. ಅಷ್ಟು ಹಣವಿಲ್ಲ. ಆದುದರಿಂದ ನಾನು ಮುಂದೆ ಏನು ಮಾಡಬೇಕು ಎಂಬ ಚಿಂತೆಯಾಗಿದೆ. ನೀವು ನನಗೆ ಮಾರ್ಗದರ್ಶನ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನನಗೆ ಬುದ್ಧಿ ಹೇಳುವವರೂ ಯಾರೂ ಇಲ್ಲ. ಆದುದರಿಂದ ತಾವು ನನಗೆ B.A. ಮುಗಿದ ನಂತರ ಅಂದರೆ ಈಗ ಏನು ಮಾಡಬೇಕೆಂದು ತಿಳಿಸಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ನೀವು ಕಷ್ಟಪಟ್ಟು ಓದಿ III year Exam ನಲ್ಲಿ ಉತ್ತಮ ಅಂಕಗಳನ್ನು ಗಳಿಸಿದರೆ ಸರ್ಕಾರಿ ಕಾಲೇಜ್‌ಗಳಲ್ಲಿ B.Ed ಸೀಟ್ ಪಡೆಯಬಹುದು. ತಾವು ಹಣಕಾಸಿನ ತೊಂದರೆ ಇರುವುದರಿಂದ ವಿದ್ಯಾಭ್ಯಾಸ ಜೊತೆ ಎಲ್ಲಿಯಾದರೂ part time ಕೆಲಸ ಮಾಡಿಕೊಳ್ಳಿ ನಿಮ್ಮ ಭವಿಷ್ಯ ಉತ್ತಮವಾಗಿರಲಿ.

ಕಲಾವತಿ, ಬ್ರಹ್ಮೇಶ್ವರ.

ನಾನು ದ್ವಿತೀಯ ಪಿ.ಯು.ಸಿ (ಸಮಾಜ) ವಿಷಯದ ಬಗ್ಗೆ ಅಧ್ಯಯನ ಮಾಡಿದ್ದೇನೆ. (೪೫%) ನಾನು ಮುಂದೆ ಪೊಲೀಸ್ ಆಗಬೇಕೆಂದಿದ್ದೇನೆ. ಅದಕ್ಕೆ ಯಾವ ತಿಂಗಳು ಅರ್ಜಿ ಹಾಕಬೇಕು. ಅದು ಎಲ್ಲಿ ಸಿಗುತ್ತವೆ ಮತ್ತು ಅದಕ್ಕೆ ಏನು ಮಾಹಿತಿ ಬೇಕು. ದಯವಿಟ್ಟು ತಿಳಿಸಿ (ವರ್ಷ ೨೨, ಎತ್ತರ ೫ ಅಡಿ



ಮನೆ ಅಂದ್ರೆ ಅಷ್ಟು ಗೊತ್ತಾಗಲ್ವಾ
ಎಲ್ಲಿ ಲಟ್ಟಣಿಗೆ, ಪೊರಕೆಗಳ
ಬಳಕೆಯಾಗುತ್ತದೆಯೋ - ಅದುವೇ ಮನೆ

೨ ಇಂಚು ತೂಕ - ೪೬ ಕೆ.ಜಿ.)

ನೀವು ಪೊಲೀಸ್ ಆಗಲು ನೀವು ನಿಮ್ಮ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಣಿ ಮಾಡಿಸಬೇಕು. ಪೊಲೀಸ್ ಇಲಾಖೆಯಲ್ಲಿ ಪೊಲೀಸರ ಅವಶ್ಯಕತೆ (ಖಾಲಿ ಹುದ್ದೆಗಳಭರ್ತಿ) ಉಂಟಾದಾಗ ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರುಗಳನ್ನು ತರಿಸಿಕೊಂಡು, ಮೊದಲು ಶಾರೀರಿಕ ಅರ್ಹತೆ ಅಂದರೆ ತೂಕ ೫೦ ಕೆಜಿ, ಎತ್ತರ ೧೫೭ (157).c.mಗಳನ್ನು ಪರೀಕ್ಷಿಸುತ್ತಾರೆ ನಂತರ ರನ್ನಿಂಗ್‌ರೇಸ್, ಹೈಜಂಪ್, ಲಾಂಗ್‌ಜಂಪ್ ಮುಂತಾದ ಪರೀಕ್ಷೆಗಳನ್ನು ನಡೆಸಿ ಆಯ್ಕೆ ಮಾಡುತ್ತಾರೆ.

ಎಮ್. ಕರಿಬಸಪ್ಪ, ಕೊಟ್ಟೂರು.

ಸರ್, ನಾನು Diploma final year (mechanical Engineering) ಓದುತ್ತಿದ್ದೇನೆ. ಆದರೆ ನನಗೆ CPED (Certificate of Physical education) ಮಾಡುವ ಆಸೆ ಅತೀವವಾಗಿದೆ. CPED ಸೇರಲು ವಿದ್ಯಾರ್ಥಿಯು ದ್ವಿತೀಯ ಪಿ.ಯು.ಸಿ. ಮುಗಿಸಿರಬೇಕು. Diploma second year ಮೇಲೆ ಅಥವಾ Diploma ಮುಗಿದ ಮೇಲೆ ನನಗೆ CPED ಸೇರುವ ಅವಕಾಶವಿದೆಯೇ ದಯವಿಟ್ಟು ತಿಳಿಸಿ.

CPED ಮಾಡಲು PUC ಪಾಸಾಗಿರಬೇಕು. ನೀವು Diploma in mechanical ಮಾಡಿರುವುದರಿಂದ Diploma ಆಧಾರದ ಮೇಲೆ CPED ಮಾಡಲು ಅವಕಾಶ ಇರುವುದನ್ನು ತಾವು CPED ಕಾಲೇಜಿನಿಂದಲೇ ಮಾಹಿತಿ ಪಡೆಯತಕ್ಕದ್ದು.

ಮಲ್ಲಿಕಾರ್ಜುನಯ್ಯ, ಚೆಲ್ಲಿಗಾನ ಹಳ್ಳಿ.

ನಾನು ದ್ವಿತೀಯ B.Com ವ್ಯಾಸಂಗ ಮಾಡುತ್ತಿದ್ದೇನೆ. ನಾನು DBA ಅಥವಾ PGDBM ಮಾಡಬೇಕೆಂದಿರುವೆ ಇದರ ವಿವರಗಳನ್ನು, ಕಾಲೇಜುಗಳನ್ನು (BAN)ತಿಳಿಸಿ. ಅಂಚೆ ಮೂಲಕ ಈ ಡಿಪ್ಲೊಮೋ ಕೋರ್ಸ್‌ಗಳನ್ನು ಮಾಡಬಹುದಾದ ಕಡಿಮೆ ಅವಧಿ Management Course ಗಳನ್ನು ತಿಳಿಸಿ.

Classes open ಆಗುವ ಮುಂಚೆ ತಿಳಿಸಬೇಕಾಗಿ ವಿನಂತಿ

DBA-Diploma in Business Administration

PGDBM- Post graduate Diploma in business management

ನೀವು B.Com ಆದನಂತರ PGDBM or DBAಯನ್ನು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಮಾಡಬಹುದು. ಹೆಚ್ಚಿನ ಮಾಹಿತಿಗೆ ಅಣ್ಣಾಮಲೈ ಯೂನಿವರ್ಸಿಟಿ , ಅಣ್ಣಾಮಲೈ ನಗರ - ೬೦೮ ೦೦೨. ಇವರನ್ನು ಸಂಪರ್ಕಿಸಿ.

ಮಂಜುನಾಥ, ಕೋಲಾರ.

ನಾನು ಬಿ.ಎ ಮುಗಿಸಿದ್ದೇನೆ. ನಾನು RTO Officer ಆಗಬೇಕೆಂಬ ಆಸೆ. ಇದರಿಂದ RTO ವಿದ್ಯಾಭ್ಯಾಸದ ಬಗ್ಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ. RTO Officer ಆಗಬೇಕಾದರೆ ಯಾವ ವಿದ್ಯಾರ್ಹತೆಯನ್ನು ಹೊಂದಿರಬೇಕು ಮತ್ತು ವಯೋಮಿತಿ ಇದ್ದರೆ ತಿಳಿಸಿ. RTO officer ಪರೀಕ್ಷೆಗೆ ಯಾವ ಸಂಸ್ಥೆ ಸೇರಬೇಕು. ಈ ಸಂಸ್ಥೆಗಳು ಕರ್ನಾಟಕದ ಯಾವ ಸ್ಥಳದಲ್ಲಿ ಇದೆ ತಿಳಿಸಿ. ಈ ಪರೀಕ್ಷೆ ಪ್ರತಿ ವರ್ಷವೂ ನಡೆಯುತ್ತದೆಯೇ ಮತ್ತು ಈ ಪರೀಕ್ಷೆ ಯಾವ ಮಾಧ್ಯಮದಲ್ಲಿ (ಕನ್ನಡ, ಇಂಗ್ಲಿಷ್) ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

RTO ಆಗಬೇಕಾದರೆ ಕನಿಷ್ಠ ವಿದ್ಯಾರ್ಹತೆ ಬಿ.ಇ. (ಮೆಕ್ಯಾನಿಕಲ್) ಅಥವಾ ಬಿ.ಇ. (ಆಟೋಮೊಬೈಲ್) ಅಥವಾ LLB ಪದವೀಧರರಾಗಿರಬೇಕು. ವಯೋಮಿತಿ ಸರ್ಕಾರದ ನಿಯಮಾನುಸಾರ ಇರುತ್ತದೆ. RTO ಆಯ್ಕೆಯನ್ನು ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸುತ್ತಾರೆ.

ಮೋಹನ್, ಹಾಸನ.

ಸರ್, ನಾನು KSRTC ITI ನಲ್ಲಿ ಒಂದು ವರ್ಷ Electrician ನಲ್ಲಿ ತರಬೇತಿ ಪಡೆದು ೬೧% ರಷ್ಟು ಅಂಕಗಳಿಂದ ಉತ್ತೀರ್ಣನಾಗಿದ್ದೇನೆ. ಇದರ ಆಧಾರದ ಮೇಲೆ ಸರ್ಕಾರಿ ಡಿಪ್ಲೊಮೋಗೆ ಸೇರಬಹುದೇ. ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಎಂದು ತಮ್ಮಲ್ಲಿ ಬೇಡಿಕೊಳ್ಳುತ್ತಿದ್ದೇನೆ.

ಅಗತ್ಯವಾಗಿ ಸರ್ಕಾರಿ Diplomaಗೆ ಸೇರಬಹುದು. ನೀವು ಹತ್ತಿರದ Diploma ಕಾಲೇಜಿನ ಪ್ರಿನ್ಸಿಪಾಲರನ್ನು ಭೇಟಿಯಾಗಿ ಹೆಚ್ಚಿನ ಮಾಹಿತಿ ಪಡೆಯಬಹುದು.

ಗಿರೀಶ್, ಬೆಂಗಳೂರು.

ಸರ್, ನಾನು ೯೨ರಲ್ಲಿ ಪಿ.ಯು.ಸಿ. ದ್ವಿತೀಯ ಶ್ರೇಣಿಯಲ್ಲಿ ವಿಜ್ಞಾನದಲ್ಲಿ ಪಾಸಾಗಿ BSC ಯಲ್ಲಿ ೨ ವರ್ಷಗಳು ಮಾತ್ರ ಮುಗಿಸಿ ಅನೇಕ ಮನೆಯ ಸಮಸ್ಯೆಗಳು ಎದುರಾದ ಕಾರಣ BSCಯು ಪೂರ್ಣವಾಗಲಿಲ್ಲ. ಆದ್ದರಿಂದ ನಾನು B.Aಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿ KAS ಮಾಡಬಹುದೇ?

ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಅಥವಾ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ನಾನು ಓದ ಬಹುದೇ? ಇಲ್ಲವೇ? KAS ಪರೀಕ್ಷೆ ಪ್ರತಿವರ್ಷ ನಡೆಯುವುದೇ? ಮತ್ತು B.A. ನಲ್ಲಿ ಯಾವ ಕೋರ್ಸುಗಳನ್ನು ಅಧ್ಯಯನ ಮಾಡಬೇಕು.

KAS ಮಾಡಲು ವಯೋಮಿತಿಯೇನು?

ನನ್ನ ಈ ಸಮಸ್ಯೆಗೆ ತಪ್ಪದೆ ಮುಂದಿನ ಸಂಚಿಕೆಯಲ್ಲಿ ಅಥವಾ ಬೇರೆ ಪ್ರತಿಯಲ್ಲಿ ನನ್ನ ವಿಳಾಸಕ್ಕೆ ತಿಳಿಸಬೇಕೆಂದು ಕೋರುತ್ತೇನೆ. ನಾನು ಈಗ Electrician ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ನೀವು B.A ಪದವಿಯನ್ನು ಮುಗಿಸಿ KAS ಪರೀಕ್ಷೆ ತೆಗೆದುಕೊಳ್ಳಬಹುದು. ಇದನ್ನು ಬೆಂಗಳೂರು ಅಥವಾ ಮೈಸೂರು ವಿಶ್ವ ವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಮಾಡಬಹುದಾಗಿದೆ.

ರಾಜಶೇಖರ, ಗುಲಬರ್ಗಾ.

ನಾನು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ ಪದವಿ ಓದುತ್ತಿದ್ದೇನೆ. ಈ ಪದವಿಯನ್ನು ಮಾಡಿಕೊಳ್ಳುತ್ತಾ ಬಿ.ಎ ಪದವಿಯನ್ನು (External) ಮೈಸೂರು ವಿಶ್ವವಿದ್ಯಾಲಯದಲ್ಲಿ ಮಾಡಬೇಕೆಂದು ಕೊಂಡಿದ್ದೇನೆ. ಇದರಿಂದೇನಾದರೂ ತೊಂದರೆ ಇದೆಯೇ ಮತ್ತು ಎರಡು ವಿಶ್ವವಿದ್ಯಾಲಯದ ಪರೀಕ್ಷೆಯ ದಿನಾಂಕ ಒಂದೇ ಇದ್ದರೆ ಹೇಗೆ? ನಾನು ಐ.ಎ.ಎಸ್. ಮಾಡಬೇಕೆಂದು ಕೊಂಡಿದ್ದೇನೆ. ಅದರಲ್ಲಿ ಬಿ.ಎ.ಗೆ ಸಂಬಂಧಿಸಿದ ವಿಷಯವನ್ನು ಆರಿಸಿಕೊಳ್ಳಲಿಚ್ಛಿಸಿರುವೆ ದಯವಿಟ್ಟು ಮಾರ್ಗದರ್ಶನ ಸೂಚಿಸಿ.

ಒಂದೇ ಬಾರಿಗೆ ಎರಡು ವಿಶ್ವ ವಿದ್ಯಾಲಯಗಳಲ್ಲಿ ಪದವಿಯನ್ನು ಮಾಡಲು ಅವಕಾಶವಿರುವುದಿಲ್ಲ. ನೀವು KAS ನಲ್ಲಿ ಯಾವುದೇ ವಿಷಯವನ್ನು ಬೇಕಾದರೂ ಆರಿಸಿಕೊಳ್ಳಬಹುದು.

■

Margadarshi, The free supplement with BISILA BADUKU August 1998 Issue. Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager: 9622 738638. Printed at M.N.S. Enterprises, Bhattarahalli, Old Madras Road, Bangalore -560 049. Editor : Chandrakanta Vaddu